ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು

JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

## ಮಾಸಪತ್ರಿಕೆ

ಸಂಪುಟ 3 ಸಂಚಿಕೆ 8

ಆಗಸ್ಟ್ 2018

## ಪರಮಪೂಜ್ಯ ಜಗದ್ಗುರು
## ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ
## 103ನೆಯ ಜಯಂತಿ ಮಹೋತ್ಸವ
## ವಿಶೇಷ ಸಂಚಿಕೆ





ಸುತ್ತೂರಿನ ಜೆಎಸ್‌ಎಸ್ ಸಂಸ್ಥೆಗಳು ಆಯೋಜಿಸಿದ್ದ ಗುರುಪೂರ್ಣಿಮಾ ಕಾರ್ಯಕ್ರಮದಲ್ಲಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಲಾಯಿತು. ಚಿತ್ರದಲ್ಲಿ ದಂಡಿಕೆರೆ ಮಠದ ಷಬ್ರ ಶ್ರೀ ಬಸವಲಿಂಗ ಸ್ವಾಮಿಗಳು, ಶ್ರೀ ಎಸ್.ಪಿ. ಉದಯಶಂಕರ್, ಡಾ. ಕೆ. ಮಹದೇವಯ್ಯ ಹಾಗೂ ಸಂಸ್ಥೆಯ ಮುಖ್ಯಸ್ಥರುಗಳಿದ್ದಾರೆ




ಮೈಸೂರಿನ ಜೆ.ಪಿ. ನಗರದಲ್ಲಿರುವ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನಲ್ಲಿ ಸಾಂಸ್ಕೃತಿಕ ವೇದಿಕೆ ಹಾಗೂ ಕ್ರೀಡಾ ಚಟುವಟಿಕೆಗಳನ್ನು ಡಾ. ಜ್ಯೋತಿ ಶಂಕರ್ ಉದ್ಘಾಟಿಸಿದರು. ಚಿತ್ರದಲ್ಲಿ ಶ್ರೀ ಎಚ್.ಎನ್. ನಾಗರಾಜ, ಶ್ರೀಮತಿ ಉಮಾಮಹೇಶ್ವರಿ, ಶ್ರೀ ಶ್ರೀನಿವಾಸ ಕೆ. ಅಯ್ಯಂಗಾರ್, ಶ್ರೀ ಎಸ್. ನಂದೀಶ್ , ಶ್ರೀಮತಿ ಎಚ್.ಟಿ. ನಿರ್ಮಲ ಮತ್ತಿತರರಿದ್ದಾರೆ



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ ಕಾರಂಜಿ: 2018-19 ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಡಾ. ಕೆ.ವಿ. ಸುರೇಶ್, ಅತಿಥಿ ಶ್ರೀಮತಿ ಶ್ವೇತಾ ಮಡಪ್ಪಾಡಿ, ಮಹಾವಿದ್ಯಾಪೀಠದ ಕಾಲೇಜು ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನ, ಚಿಂತಕ ಶ್ರೀ ಶಂಕರ್ ದೇವನೂರು ಹಾಗೂ ಪರೀಕ್ಷಾ ನಿಯಂತ್ರಣಾಧಿಕಾರಿ ಶ್ರೀ ಶಿವಮೂರ್ತಿ ಇದ್ದಾರೆ

## ತಂತ್ರಜ್ಞಾನದ ಗುಲಾಮರಾಗುವುದು ಬೇಡ - ಪ್ರೊ. ಎಂ. ಕೃಷ್ಣೇಗೌಡ

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ಕನ್ನಡ ವಿಭಾಗದ ವತಿಯಿಂದ ಪ್ರಥಮ ಚತುರ್ಮಾಸ ಪದವಿ ತರಗತಿಗಳ 'ಹೊಸಗನ್ನಡ ಕವಿತೆಗಳು' ಪಠ್ಯ ಆಧರಿಸಿದ ಭಾವಧಾರೆ : ಭಾವಗೀತೆಗಳ ಗಾಯನ ಮತ್ತು ವ್ಯಾಖ್ಯಾನ ಕಾರ್ಯಕ್ರಮವು ದಿನಾಂಕ 17.7.2018ರಂದು ನಡೆಯಿತು.

ಮುಖ್ಯ ಅತಿಥಿಗಳಾದ ಮೈಸೂರಿನ ಸಂತ ಫಿಲೋಮಿನಾ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಪ್ರೊ. ಎಂ. ಕೃಷ್ಣೇಗೌಡರವರು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡುತ್ತಾ "ಇಂದಿನ ತಂತ್ರಜ್ಞಾನ ಯುಗಕ್ಕೆ ಅನೇಕರು ಮಾರು ಹೋಗಿ, ತುಂಬಾ ಸಣ್ಣ ಸಣ್ಣ ವಿಚಾರಗಳಿಗೂ ನಿರಾಶೆಗೊಂಡು, ಆಘಾತ ತಾಳಲಾರದೆ ಬದುಕನ್ನು ಕಳೆದುಕೊಳ್ಳುತ್ತಾರೆ. ಈ ಜಗತ್ತಿನಲ್ಲಿ ಸಂತೋಷಪಡಲು ಬಹಳಷ್ಟು ಕಾರಣಗಳಿವೆ. ಪ್ರತಿಕ್ಷಣವು ನಮ್ಮದೊಂದು ಜಗತ್ತನ್ನು ಸೃಷ್ಟಿಸಿಕೊಂಡು ಮನಸ್ಸನ್ನು ಮುದಗೊಳಿಸುವ ಅವಶ್ಯಕತೆ ಇಂದು ಅಗತ್ಯವಾಗಿದೆ. ಈ ನಿಟ್ಟಿನಲ್ಲಿ 'ಭಾವಧಾರೆ' ಕಾರ್ಯಕ್ರಮವೂ ಒಂದಾಗಿದೆ. ಇಂದು ನಾವು ತಂತ್ರಜ್ಞಾನದ ಗುಲಾಮರಾಗಿದ್ದೇವೆ. ಪ್ರತಿಯೊಂದು ಲೆಕ್ಕಾಚಾರಕ್ಕೂ ಮತ್ತು ವಿಷಯಕ್ಕೂ ತಂತ್ರಜ್ಞಾನದ ಮೊರೆಹೋಗುತ್ತಿದ್ದೇವೆ. ಇದರಿಂದ ವಿನಾಶ ಖಂಡಿತ. ಜಗತ್ತಿನ ಅದ್ಭುತ ಸೌಂದರ್ಯವನ್ನು ನಮ್ಮ ಕನ್ನಡ ಭಾಷೆ ತೋರಿಸಿದೆ. ಭಾವಧಾರೆ ಎಂಬುದು ಮನೋರಂಜನೆಯೊಂದೇ ಅಲ್ಲ; ವಿದ್ಯಾರ್ಥಿಗಳಿಗೆ ಅರ್ಥವಾಗುವ ರೀತಿಯಲ್ಲಿ, ಮನಸ್ಸಿಗೆ ಮುಟ್ಟುವ ರೀತಿಯಲ್ಲಿ ಕವನಗಳನ್ನು ಪರಿಚಯಿಸಿ ಹೇಳುವ ಕಾರ್ಯಕ್ರಮ. ಇದರ ಸದುಪಯೋಗವನ್ನು ಸಮರ್ಥವಾಗಿ ಪಡೆದುಕೊಳ್ಳಿ" ಎಂದರು.

"ಮನುಷ್ಯನ ಕುತೂಹಲವನ್ನು ಕೆರಳಿಸಿ, ತನ್ಮೂಲಕ ಏಳ್ಗೆ ಪಡೆಯುವುದೇ ಶಿಕ್ಷಣ. ಶಿಕ್ಷಣ ಹುಟ್ಟಿನಿಂದಲೇ ಪ್ರಾರಂಭವಾಗುತ್ತದೆ. ಮನುಷ್ಯನ ಅರಿವನ್ನು ಹೆಚ್ಚಿಸಿ, ಬೌದ್ಧಿಕ ವಿಕಾಸವಾಗುವುದೇ ಶಿಕ್ಷಣ. ಮನುಷ್ಯನ ಮನಸ್ಸು, ವ್ಯಕ್ತಿತ್ವ ಮತ್ತು ವರ್ತನೆಗಳು ಹಸನಾಗಿ, ಕ್ರಿಯಾಶೀಲ ವ್ಯಕ್ತಿತ್ವವನ್ನು ರೂಪಿಸಿಕೊಂಡು ಹೋಗಲು ಇಂತಹ ಕಾರ್ಯಕ್ರಮಗಳು ಇಂದಿನ ಜಗತ್ತಿಗೆ ಅತ್ಯವಶ್ಯಕ" ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನರವರು ಮಾತನಾಡಿ "ಇಂತಹ ಕಾರ್ಯಕ್ರಮಗಳು ಓದುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚುವರಿಯಾಗಿ ವಿಷಯವಾರು ಕಲಿಕೆಯಲ್ಲಿ ಮಾರ್ಗದರ್ಶಕವಾಗಿವೆ. ಪ್ರೊ. ಕೃಷ್ಣೇಗೌಡರವರು ವಿದ್ಯಾರ್ಥಿನಿಯರಿಗೆ ಅರ್ಥವಾಗುವಂತೆ ಕವನಗಳ ವ್ಯಾಖ್ಯಾನ ಮಾಡಿರುವುದು ಮತ್ತು ಪಂ. ನಿತಿನ್ ರಾಜಾರಾಮ ಶಾಸ್ತ್ರಿ ತಂಡದವರು ಸುಮಧುರವಾಗಿ ಹಾಡಿರುವುದು ಬಹಳ ಸಂತೋಷವಾಗಿದೆ. ಕಾರ್ಯಕ್ರಮಕ್ಕೆ ಈರ್ವರೂ ಸಾಂಸ್ಕೃತಿಕ ಸ್ಪರ್ಶ ನೀಡಿ ವಿದ್ಯಾರ್ಥಿನಿಯರ ಮನಸ್ಸನ್ನು ಅರಳಿಸುವ ಕೆಲಸ ಮಾಡಿದ್ದಾರೆ" ಎಂದರು.

"ಬದುಕನ್ನು ಸಮರ್ಥವಾಗಿ ಎದುರಿಸುವ ಗುಣಗಳನ್ನು ಬೆಳೆಸಿಕೊಳ್ಳಿ. ಒಳ್ಳೆಯ ಭಾವನೆಗಳಲ್ಲಿ ಅನುಸಂಧಾನ ಮುಖ್ಯ. ಇಂದಿನ ಆಧುನಿಕ ತಂತ್ರಜ್ಞಾನ ಯುಗವು ನಮ್ಮನ್ನು ವಿನಾಶದ ಅಂಚಿಗೆ ಕೊಂಡೊಯ್ಯುತ್ತದೆ. ಅದಕ್ಕೆ ದಾಸರಾಗದೆ, ಮೌಢ್ಯವನ್ನು ಬೆಳೆಸಿಕೊಳ್ಳದೆ ಸತ್ಪ್ರಜೆಗಳಾಗಿ. ಇಂತಹ ಕಾರ್ಯಕ್ರಮಗಳು ನಿಮ್ಮ ಮನಸ್ಸಿಗೆ ಮುದ ನೀಡುವುದಲ್ಲದೆ, ಸೃಜನಶೀಲತೆ ಅರಳಲು ದಾರಿಯಾಗುತ್ತದೆ" ಎಂದು ನುಡಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಕೆ.ವಿ. ಸುರೇಶ, ಕಾಲೇಜಿನ ಶೈಕ್ಷಣಿಕ ಡೀನ್‌ರವರಾದ ಡಾ. ಎಚ್.ಬಿ. ಸುರೇಶ್, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಎಸ್. ಪಿ. ಉಮಾದೇವಿ, ಪರೀಕ್ಷಾಂಗ ವಿಭಾಗದ ಮುಖ್ಯಸ್ಥರಾದ ಡಾ. ಜಿ.ಆರ್. ಶಿವಮೂರ್ತಿ ಅವರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಕು. ಎಸ್. ರೋಜಾ ಪ್ರಾರ್ಥಿಸಿದರು. ಕನ್ನಡ ವಿಭಾಗದ ಉಪನ್ಯಾಸಕರಾದ ಶ್ರೀ ಶಿವಕುಮಾರ್ ಕುದೇರು ಸ್ವಾಗತಿಸಿದರು. ಡಾ. ಸಿ. ಮಹೇಂದ್ರ ವಂದನಾರ್ಪಣೆ ಮಾಡಿದರು. ಶ್ರೀ ಹೊನ್ನಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು. ಸಮಾರಂಭದಲ್ಲಿ ಕವಿ ಶ್ರೀ ಜಯಪ್ಪ ಹೊನ್ನಾಳಿ, ಕಾಲೇಜಿನ ಎಲ್ಲಾ ವಿಭಾಗಗಳ ಅಧ್ಯಾಪಕರು, ಮುಖ್ಯಸ್ಥರು, ಬೋಧಕೇತರ ವರ್ಗ ಹಾಗೂ ವಿದ್ಯಾರ್ಥಿನಿಯರು ಹಾಜರಿದ್ದರು.

ಮೈಸೂರಿನ ಸಂತ ಫಿಲೋಮಿನಾ ಕಾಲೇಜಿನ ನಿವೃತ್ತ ಪ್ರಾಂಶುಪಾಲರಾದ ಪ್ರೊ. ಎಂ. ಕೃಷ್ಣೇಗೌಡರವರು ಭಾವಗೀತೆಗಳಿಗೆ ವ್ಯಾಖ್ಯಾನ ನೀಡಿ ಕಾರ್ಯಕ್ರಮ ನಡೆಸಿಕೊಟ್ಟರು. ಪಂ. ನಿತಿನ್ ರಾಜಾರಾಮ ಶಾಸ್ತ್ರಿ ಮತ್ತು ಕು. ಶ್ರೇಯಾ ಭಟ್ ತಂಡದವರು ಗಾಯನದ ಮೂಲಕ ವಿದ್ಯಾರ್ಥಿವೃಂದವನ್ನು ರಂಜಿಸಿದರು.

□

## ಅರಮನೆ ಗುರುಮನೆಗಳಿಂದ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿ ಉಳಿಯಲು ಸಾಧ್ಯ

**ಡಾ. ಜ್ಯೋತಿ ಶಂಕರ್**

"ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ಚಟುವಟಿಕೆಗಳು ಮನಸ್ಸಿಗೆ ಮುದ ನೀಡುವುದರ ಜೊತೆಗೆ ಅವರ ವಿದ್ಯಾಭ್ಯಾಸದ ಪ್ರಗತಿಗೆ ಪೂರಕವಾಗಿರುತ್ತವೆ. ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿಯೂ ಕೂಡ ತಮ್ಮಲ್ಲಿರುವ ಸುಪ್ತ ಪ್ರತಿಭೆಗಳಿಗೆ ನೀರೆರೆದು ಪೋಷಿಸಿ ತಮ್ಮ ಜೀವನವನ್ನು ರೂಪಿಸಿಕೊಳ್ಳಬೇಕು" ಎಂದು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಡಾ. ಜ್ಯೋತಿ ಶಂಕರ್ ಅವರು ತಿಳಿಸಿದರು.

**ಮೈಸೂರಿನ ಜೆ.ಪಿ.ನಗರದ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನಲ್ಲಿ** ನಡೆದ ಸಾಂಸ್ಕೃತಿಕ ವೇದಿಕೆ ಹಾಗೂ ಕ್ರೀಡಾ ಚಟುವಟಿಕೆಗಳ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು. "ಹಿಂದಿನ ಕಾಲದಲ್ಲಿ ಗುರುಕುಲಗಳು ಶೈಕ್ಷಣಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ದೇಶ ಅಭಿವೃದ್ಧಿ ಹೊಂದಲು ಅಪಾರ ಕಾಣಿಕೆ ನೀಡಿವೆ. ಪ್ರಸ್ತುತ ಗುರುಮನೆಗಳು ಈ ಕಾರ್ಯಗಳನ್ನು ಮುಂದುವರೆಸಿದ್ದು ಅಂತೆಯೇ ಸುತ್ತೂರು ಶ್ರೀಮಠವು ಶಿಕ್ಷಣ, ಸಂಗೀತ, ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಿಗೆ ಪ್ರೋತ್ಸಾಹವನ್ನು ನೀಡುತ್ತ ಮನುಕುಲವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯುತ್ತಿದೆ. ವಿದ್ಯಾರ್ಥಿಗಳು ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸಬೇಕು. ಆಗ ಮಾತ್ರ ಉತ್ತಮ ಸಂಸ್ಕೃತಿ ಹೊಂದಲು ಸಾಧ್ಯ. ಒಳ್ಳೆಯ ಸಹವಾಸವನ್ನು ಮಾಡುವುದರ ಜೊತೆಗೆ ವಿದ್ಯಾರ್ಥಿಗಳು ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಅನಾವರಣ ಮಾಡಬೇಕು" ಎಂದು ಕರೆ ನೀಡಿದರು.

ಕ್ರೀಡಾ ಚಟುಚಟಿಕೆಗಳನ್ನು ಉದ್ಘಾಟಿಸಿ ಮಾತನಾಡಿದ ರಾಷ್ಟ್ರೀಯ ಕ್ರೀಡಾಪಟು ಮತ್ತು ಈಜು ತರಬೇತುದಾರರಾದ ಶ್ರೀ ಎಸ್. ಶಿವಕುಮಾರ್‌ರವರು "ಮಾನಸಿಕ ಹಾಗೂ ದೈಹಿಕ ಸ್ವಾಸ್ಥ್ಯಕ್ಕೆ ಕ್ರೀಡೆ ಅತ್ಯಂತ ಅಗತ್ಯ. ಇತ್ತೀಚಿನ ದಿನಗಳಲ್ಲಿ ಯುವಜನತೆ ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವತ್ತ ಗಮನ ಹರಿಸುತ್ತಿರುವುದು ಒಳ್ಳೆಯ ಬೆಳವಣಿಗೆ. ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದರೆ ವಿದ್ಯಾರ್ಥಿಗಳಿಗೆ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ಅನೇಕ ಉಜ್ವಲ ಅವಕಾಶಗಳು ಲಭಿಸುತ್ತವೆ" ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಜೆಎಸ್‌ಎಸ್ ಮಹಾವಿದ್ಯಾಪೀಠದ ಪಬ್ಲಿಕ್ ಶಾಲೆಗಳ ವಿಭಾಗದ ನಿರ್ದೇಶಕರಾದ ಶ್ರೀ ಶ್ರೀನಿವಾಸ ಕೆ. ಅಯ್ಯಂಗಾರ್ ರವರು "ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು ವಿದ್ಯಾರ್ಥಿಗಳ

ಸರ್ವತೋಮುಖ ಬೆಳವಣಿಗೆಗೆ ಕಾರಣವಾಗುತ್ತವೆ. ವಿದ್ಯಾರ್ಥಿಗಳು ಈ ನಿಟ್ಟಿನಲ್ಲಿ ಗಮನಹರಿಸಿ ತಮ್ಮ ಜೀವನವನ್ನು ರೂಪಿಸಿಕೊಳ್ಳಬೇಕು" ಎಂದು ಕರೆ ಕೊಟ್ಟರು.

ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಉಮಾಮಹೇಶ್ವರಿ, ಕಾರ್ಯದರ್ಶಿಗಳಾದ ಶ್ರೀ ಎಸ್. ನಂದೀಶ್, ಶ್ರೀಮತಿ ಎಚ್.ಟಿ. ನಿರ್ಮಲ, ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಎಚ್.ಎನ್. ನಾಗರಾಜ ಅವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕು. ನಿಸರ್ಗಪ್ರಿಯ ಪ್ರಾರ್ಥಿಸಿದರು. ಶ್ರೀಮತಿ ಎಚ್.ಟಿ. ನಿರ್ಮಲ ಸ್ವಾಗತಿಸಿದರು. ಶ್ರೀ ಎಸ್.ಎಂ. ಗುರುಪಾದಪ್ಪ ವಂದಿಸಿದರು. ಶ್ರೀ ಎಸ್. ನಂದೀಶ್ ನಿರೂಪಿಸಿದರು. □

---

## ಇಂದಿನ ವಿದ್ಯಾರ್ಥಿಗಳು ದೇಶದ ಅಮೂಲ್ಯರತ್ನಗಳು - ಪ್ರೊ. ಮೈಸೂರು ಕೃಷ್ಣಮೂರ್ತಿ

**ಮೈಸೂರಿನ ಲಕ್ಷ್ಮೀಪುರಂನಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ** ದಿನಾಂಕ 30.6.2018ರಂದು ವಿದ್ಯಾರ್ಥಿಸಂಘವನ್ನು ಉದ್ಘಾಟಿಸಿ ಮಾತನಾಡಿದ ಮೈಸೂರಿನ ಮಹಾರಾಣಿ ಕಾಮರ್ಸ್ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಪ್ರೊ. ಮೈಸೂರು ಕೃಷ್ಣಮೂರ್ತಿಯವರು "ಮಕ್ಕಳ ಆಲೋಚನಾಶಕ್ತಿ ಅದ್ಭುತವಾಗಿರುತ್ತದೆ. ಅದನ್ನು ಹರಿತಗೊಳಿಸುವಲ್ಲಿ ವಿದ್ಯಾರ್ಥಿ ಸಂಘ ಪ್ರಮುಖ ಪಾತ್ರ ವಹಿಸುತ್ತದೆ. ಆತ್ಮವಿಶ್ವಾಸ, ಆತ್ಮಬಲವನ್ನು ಸದೃಢಗೊಳಿಸಿಕೊಳ್ಳಬೇಕು. ಸಾವಿಗೆ ಶರಣಾಗುವ ಪ್ರವೃತ್ತಿಯನ್ನು ಹೋಗಲಾಡಿಸಿ ಕೊಳ್ಳಬೇಕು" ಎಂದು ಹೇಳಿ ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ಹಲವಾರು ಕಥೆಗಳನ್ನು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಮಾನಸ ಗಂಗೋತ್ರಿಯ ಅರ್ಥಶಾಸ್ತ್ರ ಪ್ರಾಧ್ಯಾಪಕರಾದ ಡಾ. ಕೆ.ಸಿ. ಬಸವರಾಜು ರವರು ಮಾತನಾಡಿ "ವಿದ್ಯಾರ್ಥಿಗಳು ತುಂಟಾಟ ಜಾಸ್ತಿ ಮಾಡಬಾರದು. ಅದು ಕಲಿಕೆಗೆ ತೊಂದರೆ ಉಂಟು ಮಾಡುತ್ತದೆ. ಅಧ್ಯಯನಕ್ಕೆ ಗಮನ ಕೊಟ್ಟು ಚೆನ್ನಾಗಿ ಕಲಿತು ಉತ್ತಮ ಅಂಕ ಗಳಿಸಿ. ತಂದೆ -ತಾಯಿಗಳಿಗೆ, ಶಾಲೆಗೆ, ಇಡೀ ದೇಶಕ್ಕೆ ಕೀರ್ತಿ ತರಬೇಕು. ಜಗತ್ತಿನಲ್ಲಿ ಅನೇಕ ದೇಶಗಳು ಬಡತನದಿಂದ ಬಳಲುತ್ತಿವೆ. ಸರಿಯಾದ ಶಿಕ್ಷಣ ಇಲ್ಲದೆ ಇರುವುದೇ ಇದಕ್ಕೆ ಕಾರಣ. ಆದ್ದರಿಂದ ಜ್ಞಾನ ಸಂಪಾದಿಸಿಕೊಳ್ಳಿ" ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಜೆಎಸ್‌ಎಸ್ ವಿದ್ಯಾಸಂಸ್ಥೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಚಿತ್ರಕಲಾ ಶಿಕ್ಷಕಿ ಶ್ರೀಮತಿ ಪ್ರೇಮ ಉಮದಿ ಯವರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು.

ಚಿ. ಕೆ.ಎನ್. ಮನೋಹರ ಪ್ರಾರ್ಥಿಸಿದನು. ಮುಖ್ಯೋಪಾಧ್ಯಾಯರಾದ ಶ್ರೀ ಎಸ್.ಸಿ. ಚೆನ್ನಬಸಪ್ಪ ನವರು ಸ್ವಾಗತಿಸಿದರು. ಚಿ. ಮನೋಹರ ವಂದಿಸಿದನು. ವಿದ್ಯಾರ್ಥಿಗಳು ನೀಡಿದ ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರನ್ನೂ ರಂಜಿಸಿದವು. ವಿದ್ಯಾರ್ಥಿ ಕು. ಸಹನ ಕಾರ್ಯಕ್ರಮ ನಿರೂಪಿಸಿದಳು.

**ಜೆಎಸ್‌ಎಸ್ ಸಂಸ್ಥೆಗಳಲ್ಲಿ ನಡೆಯುವ**
**ಕಾರ್ಯಕ್ರಮದ ವರದಿಗಳು**
**ಮತ್ತು ಛಾಯಾಚಿತ್ರಗಳನ್ನು**
**ಜೆಎಸ್‌ಎಸ್ ಮಾಸಪತ್ರಿಕೆಯ**
**ಈ ಕೆಳಕಂಡ ಇಮೇಲ್‌ಗೆ ಕಳುಹಿಸುವುದು.**
**email:jssmasapatrike@gmail.com**

## ಪ್ರಸ್ತುತ ಶಿಕ್ಷಣವು ಪುಸ್ತಕ ಮತ್ತು ಪರೀಕ್ಷೆ ಆಧಾರಿತ - ಡಾ. ಎಂ. ಪ್ರಭು

"ಪ್ರಸ್ತುತ ದಿನಗಳಲ್ಲಿ ನಮ್ಮ ಶಿಕ್ಷಣ ಪದ್ಧತಿಯು ಪುಸ್ತಕ ಮತ್ತು ಪರೀಕ್ಷೆ ಆಧಾರಿತವಾಗಿದೆ. ಈ ಕಾರಣದಿಂದಾಗಿ ವಿದ್ಯಾರ್ಥಿ ಸಮೂಹದಲ್ಲಿ ಪ್ರಾಯೋಗಿಕ ಅನ್ವಯದ ಕೊರತೆಯನ್ನು ಕಾಣುವಂತಾಗಿದೆ" ಎಂದು ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರಾದ ಡಾ. ಎಂ. ಪ್ರಭು ಅಭಿಪ್ರಾಯಪಟ್ಟರು.

**ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** "ಗ್ರಂಥಾಲಯ ಮತ್ತು ಮಾಹಿತಿ ಕೇಂದ್ರ"ದ ವತಿಯಿಂದ ಪ್ರಥಮ ವರ್ಷದ ವಿದ್ಯಾರ್ಥಿನಿಯರಿಗೆ ಆಯೋಜಿಸಿದ್ದ ಗ್ರಂಥಾಲಯ ಬಳಕೆ ಬಗ್ಗೆ ಪರಿಚಯಾತ್ಮಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. "ಪ್ರಾಚೀನ ಶಿಕ್ಷಣ ವ್ಯವಸ್ಥೆಯಲ್ಲಿ ಪ್ರಕೃತಿಯ ಮಡಿಲಲ್ಲಿ ವಿದ್ಯಾರ್ಜನೆ ಮಾಡಲಾಗುತ್ತಿತ್ತು. ಆದರೆ ಈಗ ಪ್ರಕೃತಿ ಒಂದು ಬದಿಯಲ್ಲಿದ್ದರೆ ನಾವು ಇನ್ನೊಂದು ಬದಿಯಲ್ಲಿದ್ದೇವೆ. ನಮ್ಮ ಶಿಕ್ಷಣ ವ್ಯವಸ್ಥೆಯು ಅಂದು ವಿಶ್ವಕ್ಕೇ ಮಾದರಿಯಾಗಿತ್ತು. ಜ್ಯೋತಿಷ್ಯ, ಗಣಿತಶಾಸ್ತ್ರ, ಅರ್ಥಶಾಸ್ತ್ರ, ವೈದ್ಯಕೀಯಶಾಸ್ತ್ರ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ನಾವು ವಿಶ್ವಕ್ಕೆ ಮಹತ್ತರ ಕೊಡುಗೆ ನೀಡಿದ್ದೇವೆ. ಇಂದು ನಾವು ಅಂದಿನ ಜ್ಞಾನವ್ಯವಸ್ಥೆಯನ್ನು ಸರಿಯಾಗಿ ನೆನಪಿಸುವುದರೊಂದಿಗೆ ತಂತ್ರಜ್ಞಾನವನ್ನು ಸಂಯೋಜನೆ ಗೊಳಿಸಿ ಶಿಕ್ಷಣ ನೀಡುವ ಮೂಲಕ ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿ ಗೊಳಿಸಬೇಕಿದೆ. ನಮ್ಮಲ್ಲಿನ ಶ್ರೇಷ್ಠತೆಯನ್ನು ವಿದೇಶಿಯರು ಅಳವಡಿಸಿಕೊಳ್ಳುತ್ತಿದ್ದರೆ ನಾವು ಜಾಣಕುರುಡರುತೆ ನಮ್ಮತನವನ್ನು ಮರೆತು ಪಾಶ್ಚಾತ್ಯ ವ್ಯವಸ್ಥೆ ಕಡೆ ವಾಲಿದ್ದೇವೆ. ಸಿದ್ಧಾಂತ ಮತ್ತು ಪ್ರಾಯೋಗಿಕ ಜ್ಞಾನವನ್ನು ಸಮತೋಲಿತ ವಾಗಿ ನೀಡುವ ವ್ಯವಸ್ಥೆಗೆ ಒತ್ತು ನೀಡಬೇಕು" ಎಂದು ತಿಳಿಸಿದರು.

ಗ್ರಂಥಪಾಲಕರಾದ ಶ್ರೀ ಶ್ರೀನಿವಾಸ್‌ರವರು ಮಾತನಾಡಿ "ಇಂತಹ ಅತ್ಯಾಧುನಿಕ ತಂತ್ರಜ್ಞಾನ ಸೌಲಭ್ಯಗಳನ್ನೊಳಗೊಂಡ ಗ್ರಂಥಾಲಯವನ್ನು ದೊಡ್ಡ ನಗರಗಳಲ್ಲಿ ಕಾಣಬಹುದಾಗಿದೆ. ಆದರೆ ಜೆಎಸ್‌ಎಸ್ ಮಹಾವಿದ್ಯಾಪೀಠವು ಸ್ಥಾಪಿಸುವ ಶಿಕ್ಷಣ ಸಂಸ್ಥೆಗಳು ಎಲ್ಲೇ ಇದ್ದರೂ ಅತ್ಯಾಧುನಿಕ ಸೌಲಭ್ಯಗಳನ್ನು ಹೊಂದಿರುತ್ತವೆ. ಗ್ರಂಥಾಲಯವನ್ನು ಸದುಪಯೋಗ ಪಡಿಸಿಕೊಳ್ಳಿ. ಗ್ರಂಥಾಲಯದಲ್ಲಿ ಕಲ್ಪಿಸಿರುವ ಇ-ಸಂಪನ್ಮೂಲದ ಉಪಯೋಗ ಪಡೆಯಿರಿ" ಎಂದರು.

ಪ್ರಾಂಶುಪಾಲರಾದ ಪ್ರೊ. ಉಮೇಶ ಅಧ್ಯಕ್ಷತೆ ವಹಿಸಿದ್ದರು. ಕು. ಎಸ್. ಕಾವ್ಯ ಸ್ವಾಗತಿಸಿದರು. ಕು. ಎನ್. ರಮ್ಯಾ ವಂದಿಸಿದರು.



ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ ಗ್ರಂಥಾಲಯ ಬಳಕೆ ಕುರಿತ ಪರಿಚಯಾತ್ಮಕ ಕಾರ್ಯಕ್ರಮದಲ್ಲಿ ಡಾ. ಎಂ. ಪ್ರಭುರವರು ಮಾತನಾಡುತ್ತಿರುವುದು


**ಶ್ರೀಕ್ಷೇತ್ರದಲ್ಲಿ 2018 ರಲ್ಲಿ ಜರುಗಲಿರುವ ತಿಂಗಳ ಸಾಮೂಹಿಕ ವಿವಾಹ**

**ಸೆಪ್ಟೆಂಬರ್ – 19, ಬುಧವಾರ**

**ವಿವರಗಳಿಗೆ ಸಂಪರ್ಕಿಸಿ:**
**ಆಡಳಿತಾಧಿಕಾರಿಗಳು**
**ಜೆಎಸ್‌ಎಸ್ ಸಂಸ್ಥೆಗಳು, ಸುತ್ತೂರು**

**ದೂರವಾಣಿ ಸಂಖ್ಯೆ :**
**08221–232559, 232033, 232044**

## ಜನಸಂಖ್ಯೆ ದೇಶಕ್ಕೆ ವರವೂ ಆಗಬಲ್ಲುದು - ಡಾ. ಎನ್.ಎಸ್. ಸತೀಶ್

"ಒಂದು ನಾಣ್ಯಕ್ಕೆ ಎರಡು ಮುಖಗಳಿರುವ ಹಾಗೆ ಜನಸಂಖ್ಯೆ ಬಾಹುಳ್ಯಕ್ಕೂ ಅನುಕೂಲ ಮತ್ತು ಅನನುಕೂಲ ಎಂಬ ಎರಡು ಮುಖಗಳುಂಟು. ಜನ ಸಂಖ್ಯೆಯು ದೇಶಕ್ಕೆ ವರವೂ ಹೌದು ಎಂಬುದನ್ನು ಜನಸಂಖ್ಯೆ ಹೆಚ್ಚಳದಿಂದ ಹೆಣಗಾಡುತ್ತಿದ್ದ ಚೀನಾ ದೇಶವು ಅದೇ ಮಾನವ ಸಂಪನ್ಮೂಲವನ್ನು ಬಳಸಿಕೊಂಡು ಇಂದು ವಿಶ್ವದಲ್ಲಿ ಬೃಹತ್ ಆರ್ಥಿಕ ಶಕ್ತಿಗಳಲ್ಲಿ ಒಂದೆನಿಸಿಕೊಂಡಿರುವುದರಿಂದ ಅರಿಯಬಹುದಾಗಿದೆ" ಎಂದು ಭೂಗೋಳಶಾಸ್ತ್ರ ಪ್ರಾಧ್ಯಾಪಕರಾದ ಡಾ. ಎನ್.ಎಸ್. ಸತೀಶ್‌ರವರು ಅಭಿಪ್ರಾಯಪಟ್ಟರು.

ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಭೂಗೋಳಶಾಸ್ತ್ರ ವಿಭಾಗದ ವತಿಯಿಂದ 'ವಿಶ್ವಜನಸಂಖ್ಯಾ ದಿನಾಚರಣೆ' ಅಂಗವಾಗಿ ಆಯೋಜಿಸಿದ್ದ 'ಜನಸಂಖ್ಯೆ ಮತ್ತು ಆರ್ಥಿಕ ಅಭಿವೃದ್ಧಿ' ಎಂಬ ವಿಷಯದ ಮೇಲೆ ಅವರು ವಿಶೇಷ ಉಪನ್ಯಾಸ ನೀಡಿದರು. "ಜನಸಂಖ್ಯೆ ಎಂದಾಕ್ಷಣ ಅದನ್ನೊಂದು ಸಮಸ್ಯೆಯಾಗಿಯೋ, ನಕರಾತ್ಮಕ ಅಂಶವಾಗಿಯೋ ಪರಿಗಣಿಸುತ್ತೇವೆ. ಆದರೆ ದೇಶದ ಯುವ ಸಂಖ್ಯೆ ಹೆಚ್ಚಿದಲ್ಲಿ ದೇಶದ ಆರ್ಥಿಕ ಸ್ಥಿತಿಯೂ ಉತ್ತಮವಾಗುತ್ತದೆ. ಡೇವಿಡ್ ಬ್ಲೂಮ್ ಪ್ರತಿಪಾದಿಸಿರುವಂತೆ ಜನಸಂಖ್ಯಾ ಲಾಭಾಂಶವು ಯಾವುದೇ ದೇಶದ ಕ್ಷಿಪ್ರ ಆರ್ಥಿಕ ಬೆಳವಣಿಗೆಗೆ ಹೆಚ್ಚು ಪೂರಕ" ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಂಶುಪಾಲರಾದ ಪ್ರೊ. ಉಮೇಶ್‌ರವರು "ಜ್ಞಾನಾಧಾರಿತ ಆರ್ಥಿಕ ಯುಗದಲ್ಲಿ ಕುಶಲ ಹಾಗೂ ಉದ್ಯೋಗ ಸಾಮರ್ಥ್ಯವುಳ್ಳ ಮಾನವಶಕ್ತಿ ಬಹಳ ಮುಖ್ಯ. ಆದರೆ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಕೈಗಾರಿಕಾ ಉದ್ಯೋಗಗಳಿಗೆ ಅವಶ್ಯವಿರುವ ಕೌಶಲ್ಯತೆಯನ್ನು ಬೆಳೆಸುವ ಪಠ್ಯಕ್ರಮ ತೀರಾ ವಿರಳ. ಯುವ ಜನಾಂಗವನ್ನು ವಿದ್ಯಾವಂತರಾಗಿಸುವುದರ ಜೊತೆಜೊತೆಗೆ ಪ್ರಸ್ತುತ ಬೇಡಿಕೆಗೆ ಅನುಗುಣವಾಗಿ ನೌಕರಿಯೋಗ್ಯರನ್ನಾಗಿಯೂ ಮಾಡುವ ನಿಟ್ಟಿನಲ್ಲಿ ಕೌಶಲ್ಯವರ್ಧನೆಗೆ ಮುಂದಾಗಬೇಕು" ಎಂದು ತಿಳಿಸುತ್ತ, ವಿಶ್ವ ಜನಸಂಖ್ಯೆ ದಿನಾಚರಣೆಯ ಮಹತ್ವವನ್ನು ವಿವರಿಸಿದರು.

ಭೂಗೋಳಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಶ್ರೀಮತಿ ಎ.ಎಸ್. ಸ್ಮಿತಾ ಹಾಗೂ ಶ್ರೀ ಬಿ. ಮಂಜುನಾಥ್‌ರವರು ವೇದಿಕೆಯಲ್ಲಿ ಉಪಸ್ಥಿತರಿದ್ದರು. ಕು. ರಕ್ಷಿತ ಸ್ವಾಗತಿಸಿ, ವಂದಿಸಿದರು.

---

## ಹರ ಮುನಿದರೆ ಗುರು ಕಾಯುವ - ದಂಡಿಕೆರೆ ಶ್ರೀಗಳು

"ಹರ ಮುನಿದರೆ ಗುರು ಕಾಯುವ, ಗುರು ಮುನಿದರೆ ಹರನಿಂದಲೂ ಕಾಯಲಸಾಧ್ಯ" ಎಂದು ದಂಡಿಕೆರೆ ಮಠದ ಪೂಜ್ಯ ಷ.ಬ್ರ.ಶ್ರೀ ಬಸವಲಿಂಗ ಸ್ವಾಮಿಗಳು ಹೇಳಿದರು.

ಸುತ್ತೂರಿನ ಶ್ರೀ ಶಿವರಾತ್ರಿ ರಾಜೇಂದ್ರ ಶಿಕ್ಷಣ ಸಮುಚ್ಚಯದಲ್ಲಿ ದಿನಾಂಕ 28.7.2018ರಂದು ಆಯೋಜಿಸಿದ್ದ ಗುರುಪೂರ್ಣಿಮಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅವರು ಆಶೀರ್ವಚನ ನೀಡುತ್ತಾ ಗುರುವಿನ ಮಹತ್ವವನ್ನು ಹಲವು ದೃಷ್ಟಾಂತಗಳ ಮೂಲಕ ತಿಳಿಸಿದರು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರಿನ ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜಿನ ಪ್ರಾಂಶುಪಾಲರಾದ ಡಾ. ಕೆ.ಎಂ. ಮಹಾದೇವಯ್ಯನವರು ಮಾತನಾಡುತ್ತಾ "ಗು-ಎಂದರೆ ಅಂಧಕಾರ, ರು-ಎಂದರೆ ಅದನ್ನು ನಿವಾರಿಸುವುದು. ಅಜ್ಞಾನವೆಂಬ ಅಂಧಕಾರವನ್ನು ಹೋಗಲಾಡಿಸುವ ಶಕ್ತಿಯೇ ಗುರು. ಸುತ್ತೂರು

ಮಹಾಸಂಸ್ಥಾನವು ಜನತೆಯ ಸರ್ವಾಂಗೀಣ ಬೆಳವಣಿಗೆಗೆ ಪೂರಕವಾಗಿರುವ ಎಲ್ಲಾ ರೀತಿಯ ಸೌಲಭ್ಯಗಳನ್ನು ಎಲ್ಲಾ ವರ್ಗದ ಜನರಿಗೆ ನೀಡುತ್ತಿದೆ. ಅನ್ನದಾಸೋಹ, ಅಕ್ಷರ ದಾಸೋಹ, ಧರ್ಮದಾಸೋಹವೆಂಬ ತ್ರಿವಿಧ ದಾಸೋಹಗಳನ್ನು ಮಾಡುತ್ತಾ ಸಮಾಜದ ಎಲ್ಲಾ ವರ್ಗದವರ ಪಾಲಿಗೆ ಕಾಮಧೇನು, ಕಲ್ಪವೃಕ್ಷದಂತೆ ನಿಷ್ಕಾಮಕರ್ಮದಿಂದ ಸೇವೆ ಮಾಡುತ್ತಿರುವುದು ಮಹತ್ವದ ಸಂಗತಿ" ಎಂದು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಪಿ. ಉದಯಶಂಕರ್ ರವರು ಸಂಸ್ಕೃತ ವಿದ್ವತ್ ಮಧ್ಯಮಾ ತರಗತಿಗಳ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣ ಪತ್ರಗಳನ್ನು ವಿತರಿಸಿ ಶುಭ ಹಾರೈಸಿದರು.

ಪ್ರಾಂಶುಪಾಲರಾದ ಶ್ರೀಮತಿ ಸುನಂದಾ ಭೂಪಾಳಿಯವರು ಸ್ವಾಗತ ಕೋರಿ ಪ್ರಾಸ್ತಾವಿಕ ನುಡಿಯನ್ನಾಡುತ್ತಾ" ಏನೆಲ್ಲವನ್ನೂ ಮಾನವನು ಪಡೆದಿದ್ದರೂ ಗುರುವಿನ ಚರಣದಲ್ಲಿ ಮನಸ್ಸು ಮಗ್ನವಾಗದಿದ್ದರೆ ಜೀವನ ವ್ಯರ್ಥವಾಗುವುದು. ಗುರುವಿನ ಮಾರ್ಗದರ್ಶನ ಪ್ರಸ್ತುತ ಸಮಾಜಕ್ಕೆ ಅವಶ್ಯಕ" ಎಂದರು.

ಶಾಲಾ ಮಕ್ಕಳು ಪ್ರಾರ್ಥಿಸಿದರು. ಸಂಸ್ಕೃತ ಕಾಲೇಜಿನ ಉಪನ್ಯಾಸಕರಾದ ಶ್ರೀ ಎ.ಎಸ್. ಶಿರೂರಮಠರವರು ವಂದನಾರ್ಪಣೆ ಮಾಡಿದರು. ಜೆಎಸ್‌ಎಸ್ ಸಂಸ್ಕೃತ ಪಾಠಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಚಂದ್ರಮೌಳಿಯವರು ಕಾರ್ಯಕ್ರಮದ ನಿರೂಪಣೆ ಮಾಡಿದರು. ಕಾರ್ಯಕ್ರಮದಲ್ಲಿ ಸುತ್ತೂರಿನ ಜೆಎಸ್‌ಎಸ್ ಸಂಸ್ಥೆಗಳ ಎಲ್ಲಾ ವಿಭಾಗಗಳ ಮುಖ್ಯಸ್ಥರು ಹಾಜರಿದ್ದರು.

---

## ಯೋಗ ಒಂದು ದಿನದ ಕಾಯಕವಲ್ಲ - ಶ್ರೀಮತಿ ವಿ. ಭಾಗ್ಯಲಕ್ಷ್ಮಿ

"ಯೋಗ ಎಂಬುದು ಒಂದು ದಿನದ ಕಾಯಕವಲ್ಲ, ಬದಲಾಗಿ ಜೀವನದುದ್ದಕ್ಕೂ ಮಾಡುವ ನಿರಂತರ ಪ್ರಕ್ರಿಯೆ. ದೈಹಿಕವಾಗಿ ಸದೃಢವಾಗಿರುವ ಯುವಕರು ಮಾನಸಿಕ ಒತ್ತಡದಿಂದ ಚಿಕ್ಕ ಚಿಕ್ಕ ವಯಸ್ಸಿನಲ್ಲಿಯೇ ಮರಣ ಹೊಂದುತ್ತಿದ್ದಾರೆ. ಯೋಗದಿಂದ ಮಾತ್ರ ಮಾನಸಿಕವಾಗಿ ಸದೃಢರಾಗಲು ಸಾಧ್ಯ" ಎಂದು ಯೋಗಶಿಕ್ಷಕರಾದ ಶ್ರೀಮತಿ ವಿ. ಭಾಗ್ಯಲಕ್ಷ್ಮಿಯವರು ತಿಳಿಸಿದರು.

**ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ** ದಿನಾಂಕ 25.7.2018ರಂದು ಹಿರಿಯ ವಿದ್ಯಾರ್ಥಿನಿಯರ ವೇದಿಕೆ ವತಿಯಿಂದ ಆಯೋಜಿಸಿದ್ದ ಒಂದು ತಿಂಗಳ ಯೋಗಾಭ್ಯಾಸದ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು. "ಉತ್ತಮ ಆರೋಗ್ಯ ಹಾಗೂ ಮನಃಸ್ಥಿತಿಗಾಗಿ ನಮ್ಮ ಜೀವನದಲ್ಲಿ ಯೋಗವನ್ನು ಅಳವಡಿಸಿಕೊಂಡು ಮಾನಸಿಕ ಸ್ತಿಮಿತತೆಯನ್ನು ಪಡೆದು ಆರೋಗ್ಯವಂತರಾಗಿ ಬಾಳೋಣ. ಯೋಗದ ಮೂಲಕ ನಿಮ್ಮ ಮನಸ್ಸು ವಿಕಾಸವಾಗಲಿ" ಎಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಂಶುಪಾಲ ಪ್ರೊ. ಉಮೇಶ್‌ರವರು "ಯೋಗವು ದೇಹ ಮತ್ತು ಮನಸ್ಸುಗಳನ್ನು ಬೆಸೆಯುವ ಆಧ್ಯಾತ್ಮಿಕ ಪ್ರಕ್ರಿಯೆ. ಈ ಯೋಗವು ಜಗತ್ತನ್ನೆಲ್ಲ ಆವರಿಸುತ್ತಿರುವುದು ಹೆಮ್ಮೆಯ ಸಂಗತಿ. ಭಾರತದಿಂದ ಪ್ರಪಂಚಕ್ಕೆ ನೀಡಿದ ಬಹು ದೊಡ್ಡ ಕೊಡುಗೆಯಾಗಿದೆ. ಮನಸ್ಸು ಮತ್ತು ದೇಹದ ಸ್ವಾಸ್ಥ್ಯವನ್ನು ಕಾಪಾಡಬಲ್ಲ, ಯೋಜನೆ ಮತ್ತು ಕ್ರಿಯೆಯ ನಡುವೆ ಸಾಮರಸ್ಯ ತರಬಲ್ಲ, ಮನಸ್ಸು ಮತ್ತು ನಿಸರ್ಗದ ನಡುವೆ ಸಮತೋಲನ ಕಾಪಾಡಬಲ್ಲ, ಆರೋಗ್ಯ ಮತ್ತು ಜೀವನಕ್ರಮ ಸುಧಾರಿಸಿಕೊಳ್ಳಲು ನೆರವಾಗಬಲ್ಲ ಗುಣ ಯೋಗಕ್ಕಿದೆ. ಆದ್ದರಿಂದ ಯೋಗದ ಮಹತ್ವವನ್ನು ಅರಿತು ಈ ಶಿಬಿರದ ಸದುಪಯೋಗ ಪಡೆದು ಉತ್ತಮ, ಆರೋಗ್ಯದಾಯಕ



ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನಡೆದ ಯೋಗಾಭ್ಯಾಸ ಶಿಬಿರವನ್ನು ಶ್ರೀಮತಿ ವಿ. ಭಾಗ್ಯಲಕ್ಷ್ಮಿಯವರು ಉದ್ಘಾಟಿಸುತ್ತಿರುವುದು

ಬದುಕು ಹೊಂದಿ" ಎಂದು ಕರೆ ನೀಡಿದರು.

ವೇದಿಕೆಯಲ್ಲಿ ಶ್ರೀಮತಿ ಎ.ಎಸ್. ಸ್ಮಿತಾ, ಶ್ರೀಮತಿ ಎಸ್. ಮಮತ, ಹಿರಿಯ ವಿದ್ಯಾರ್ಥಿನಿಯರ ವೇದಿಕೆ ಸಂಚಾಲಕಿ ಶ್ರೀಮತಿ ಎನ್. ವಾಣಿ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕಿ ಶ್ರೀಮತಿ ಕೆ.ಆರ್. ಉಮಾದೇವಿಯವರು ಉಪಸ್ಥಿತರಿದ್ದರು.

ಹಿರಿಯ ವಿದ್ಯಾರ್ಥಿನಿ ಕು. ಆರ್.ಪಿ. ಸೌಮ್ಯ ಸ್ವಾಗತಿಸಿ, ವಂದಿಸಿದರು. ಶ್ರೀಮತಿ ವಿ. ಗೀತಾ ಕಾರ್ಯಕ್ರಮವನ್ನು ನಿರೂಪಿಸಿದರು.

## ನಿರ್ಧಾರ ಸರಿಯಿದ್ದರೆ ಭವಿಷ್ಯ ಸುಂದರವಾಗಿರುತ್ತದೆ - ಶ್ರೀ ಉಮೇಶ

"ವಿದ್ಯಾರ್ಥಿಸಮೂಹದಲ್ಲಿ ಹತ್ತಾರು ರೀತಿಯ ಪ್ರತಿಭೆಗಳಿರುತ್ತವೆ. ಅವುಗಳನ್ನು ಗುರುತಿಸಿ ಅವರ ಪ್ರತಿಭೆಗೆ ಅನುಗುಣವಾಗಿ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವಂತೆ ಮಾರ್ಗದರ್ಶನ ನೀಡಬೇಕು. ಸೂಕ್ತ ಸಮಯದ ಸರಿಯಾದ ನಿರ್ಧಾರದಿಂದ ಭವಿಷ್ಯದ ಬದುಕನ್ನು ಸುಂದರವಾಗಿ ಸಬಹುದು" ಎಂದು ಚಾರ್ಟರ್ಡ್ ಅಕೌಂಟೆಂಟ್ ಶ್ರೀ ಉಮೇಶ ಅಭಿಪ್ರಾಯಪಟ್ಟರು.

ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ದಿನಾಂಕ 25.7.2018ರಂದು ವಾಣಿಜ್ಯ ಮತ್ತು ನಿರ್ವಹಣಾ ವಿಭಾಗದ ಕಾಮರ್ಸ್ ಕ್ಲಬ್ ವತಿಯಿಂದ ಆಯೋಜಿಸಿದ್ದ 'ಆನ್‌ಲೈನ್ ಮತ್ತು ಆ್ಯಪ್-ಬೇಸಿಕ್ ನೆಸೆಸಿಟಿ' ಎಂಬ ವಿಷಯದ ಮೇಲೆ ವಿಶೇಷ ಉಪನ್ಯಾಸ ನೀಡಿದರು. "ಪ್ರಸ್ತುತ ಹೆಚ್ಚು ಉದ್ಯೋಗದ ಮಾರುಕಟ್ಟೆ ಹೊಂದಿರುವ ಮಲ್ಟಿಮೀಡಿಯಾ ಸಾಕಷ್ಟು ವೇಗಗತಿಯಲ್ಲಿ ಬೆಳವಣಿಗೆ ಹೊಂದುತ್ತಿದೆ. ಅಂತರ್ಜಾಲದ ಕಾಲದಲ್ಲಿ ಬದುಕುತ್ತಿರುವ ನಾವು ಪ್ರತಿಯೊಂದಕ್ಕೂ ಆನ್‌ಲೈನ್ ಮತ್ತು ಆ್ಯಪ್‌ಗಳ ಮೇಲೆ ಅವಲಂಬಿತರಾಗಿರುತ್ತೇವೆ. ಸಾಮರ್ಥ್ಯಕ್ಕಿಂತ ನಮಗೆ ಇಂದು ಕೌಶಲ್ಯದ ಅಗತ್ಯತೆ, ಸೃಜನಶೀಲತೆ ಬೇಕಿದೆ.




ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಚಾರ್ಟರ್ಡ್ ಅಕೌಂಟೆಂಟ್ ಶ್ರೀ ಉಮೇಶ್‌ರವರು ಉಪನ್ಯಾಸ ನೀಡಿದರು

ಕೌಶಲ್ಯಕ್ಕೆ ಇಂದು ಜಗತ್ತಿನಲ್ಲಿ ಹೆಚ್ಚಿನ ಬೆಲೆ ಇದೆ. ಸಾಂಪ್ರದಾಯಿಕ ಕೋರ್ಸ್‌ಗಳ ಹೊರತಾಗಿ ವೃತ್ತಿ ಸೃಷ್ಟಿಸಿಕೊಡುವ ಅನೇಕ ಕೋರ್ಸ್‌ಗಳು ಇಂದು ಲಭ್ಯವಿದ್ದು ವಿದ್ಯಾರ್ಥಿಗಳು ಕೌಶಲ ಶಿಕ್ಷಣ ಪಡೆಯುವುದರತ್ತ ಗಮನ ಹರಿಸಬೇಕಿದೆ" ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಂಶುಪಾಲ ಪ್ರೊ. ಉಮೇಶರವರು "ತಂತ್ರಜ್ಞಾನ ವೇಗವಾಗಿ ಬೆಳವಣಿಗೆ ಕಾಣುತ್ತಿದ್ದು ಜನರೂ ಕೂಡ ತಂತ್ರಜ್ಞಾನ ವೇಗಕ್ಕೆ ಹೆಜ್ಜೆ ಇಡಬೇಕಾದ ಅನಿವಾರ್ಯತೆ ನಿರ್ಮಾಣವಾಗಿದೆ. ಎಲ್ಲರೂ ವೈದ್ಯರು, ಇಂಜಿನಿಯರ್, ಲೆಕ್ಕ ಪರಿಶೋಧಕರಾಗಲು ಸಾಧ್ಯವಿಲ್ಲ. ಕೌಶಲ್ಯ ಹಾಗೂ ಸೃಜನಶೀಲತೆಯಿದ್ದಲ್ಲಿ ಮತ್ತು ಪ್ರಚಲಿತ ವಿದ್ಯಮಾನಗಳ ವಿಷಯದಲ್ಲಿ ಪರಿಪಕ್ವತೆಯಿದ್ದಲ್ಲಿ ಯಶಸ್ಸು ಪಡೆಯುವುದು ಸುಲಭ. ತಂತ್ರಜ್ಞಾನದಲ್ಲಿ ಅನುಕೂಲ ಹಾಗೂ ಅನಾನುಕೂಲಗಳೆರಡೂ ನಾಣ್ಯದ ಎರಡು ಮುಖಗಳಂತೆ ಇರುತ್ತವೆ. ಪ್ರಸ್ತುತ ಜೀವನದ ಅನಿವಾರ್ಯತೆ ಎಂದೇ ಬಿಂಬಿತವಾಗುತ್ತಿರುವ ತಂತ್ರಜ್ಞಾನವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡಲ್ಲಿ ಉಜ್ವಲ ಭವಿಷ್ಯ ಹೊಂದಬಹುದಾಗಿದೆ' ಎಂದರು.

ವ್ಯವಹಾರ ನಿರ್ವಹಣಾ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಎಸ್. ಮಮತ, ವಾಣಿಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಸುರೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಶ್ರೀಮತಿ ಎಸ್. ಮಮತ ಸ್ವಾಗತಿಸಿ, ವಂದಿಸಿದರು.

ಏನೆಂದರಿಯರು, ಎಂತೆಂದರಿಯರು
ಬರುಮಾತಿನ ಬ್ರಹ್ಮವನಾಡುತ್ತಿಪ್ಪರು
ರುದ್ರನ ನೊಸಲ ಕಣ್ಣ ಕಿಚ್ಚಿನೊಳಗೆ ತ್ರಿಪುರವ
ಸುಡಲರಿಯದೆ
ಕಾಮನ ಕಣ್ಣ ಕಿಚ್ಚಿನೊಳಗೆ ತ್ರಿಪುರವ ಸುಡುತ್ತಿಪ್ಪರು
ಭೂಮಿಯಾಕಾಶವ ಮೆಟ್ಟಿ
ಕಾಮಗುಣಂಗಳ ಕೂಡೆ ಕಾದಿ ಗೆಲಲರಿಯದೆ
ನೀಲಗಿರಿಯ ಮೇಲೆ ನಿಂದು
ಉಲಿವ ಉಯ್ಯಾಲೆಯನಾಡುತ್ತಿಪ್ಪರಯ್ಯಾ
ಗುಹೇಶ್ವರಾ, ನಿಮ್ಮನರಿದೆಹೆವೆಂಬವರೆಲ್ಲ
ಬರುದೊರೆವೋದರಯ್ಯಾ

- ಅಲ್ಲಮಪ್ರಭು

# ವಿದ್ಯಾರ್ಥಿ ಸಂಘದ ಉದ್ಘಾಟನೆ

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ** ದಿನಾಂಕ 11.7.2018ರಂದು ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಾಮಾನ್ಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಚಿದ್ರೆ ಶಂಕರಯ್ಯಸ್ವಾಮಿಯವರು ಮಾತನಾಡಿ "ವಿದ್ಯಾರ್ಥಿಗಳು ಶಾಲಾ ಜೀವನದಲ್ಲೇ ಶಿಸ್ತು ಮತ್ತು ಸಮಯಪ್ರಜ್ಞೆಯನ್ನು ರೂಢಿಸಿಕೊಂಡರೆ ತಮ್ಮ ಮುಂದಿನ ಜೀವನ ಸುಗಮವಾಗಿರುತ್ತದೆ. ವಿದ್ಯಾರ್ಥಿಗಳು ನಾಯಕತ್ವದ ಗುಣಗಳನ್ನು ಮೈಗೂಡಿಸಿಕೊಂಡು ದೇಶವನ್ನು ಪ್ರಗತಿಯತ್ತ ಮುನ್ನಡೆಸಬೇಕು" ಎಂದರು.

ಮೈಸೂರು ದಕ್ಷಿಣವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಶಿವಕುಮಾರ್‌ರವರು ವಿದ್ಯಾರ್ಥಿಸಂಘವನ್ನು ಉದ್ಘಾಟಿಸಿ ಮಾತನಾಡುತ್ತಾ "ಪ್ರಸ್ತುತ ಶೈಕ್ಷಣಿಕ ವರ್ಷದ ಎಲ್ಲಾ ಕಾರ್ಯಕ್ರಮಗಳು ಸುಸೂತ್ರವಾಗಿ ನೆರವೇರಲಿ, ತಮ್ಮಲ್ಲಿ ಸ್ಪರ್ಧಾತ್ಮಕ ಯುಗವನ್ನು ಎದುರಿಸಿ ನಿಲ್ಲುವ ಶಕ್ತಿ ಬರಲಿ, ಪ್ರತಿಯೊಬ್ಬರಲ್ಲೂ ಪ್ರತಿಭೆ ಇದ್ದು ಅದನ್ನು ಗುರುತಿಸಿ ಹೊರತೆಗೆಯುವ ಕೆಲಸ ವಿದ್ಯಾರ್ಥಿಸಂಘದಿಂದ ಆಗಬೇಕಾಗಿರುವುದರಿಂದ ಸುಪ್ತಪ್ರತಿಭೆಗಳಿಗೆ ಇದು ವೇದಿಕೆಯಾಗಲಿ" ಎಂದು ನುಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಎಸ್‌ಜೆಸಿಇ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ಶ್ರೀಕಾಂತ್‌ರವರು ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ನೆನಪಿನ ಕಾಣಿಕೆ ಮತ್ತು ಪ್ರಶಸ್ತಿಪತ್ರಗಳನ್ನು ನೀಡಿ ಮಾತನಾಡುತ್ತಾ "ನಾನು ಇದೇ ಶಾಲೆಯ ವಿದ್ಯಾರ್ಥಿಯಾಗಿದ್ದು ನನ್ನ ಪ್ರಗತಿಗೆ ಕಾರಣರಾದ ಗುರುಗಳನ್ನು ಸದಾ ಸ್ಮರಿಸಿಕೊಳ್ಳುತ್ತೇನೆ. ಪ್ರತಿಭಾ ಪುರಸ್ಕೃತರಾದ ತಾವೂ ಸಹ ಶಿಕ್ಷಕವೃತ್ತಿಗೆ ಬರಬೇಕು. ಗುರುಗಳ ಮಾರ್ಗದರ್ಶನದೊಂದಿಗೆ ಮುನ್ನಡೆದರೆ ತಮಗೆ ಯಶಸ್ಸು ಖಂಡಿತ. ವಿದ್ಯಾರ್ಥಿಗಳು ತಮ್ಮ ಬಹುಮುಖ ಪ್ರತಿಭೆಯನ್ನು ಹೊರಹಾಕಲು ಇರುವ ಅವಕಾಶಗಳನ್ನು ಸರಿಯಾಗಿ ಬಳಸಿಕೊಳ್ಳಬೇಕು. ವಿದ್ಯಾರ್ಥಿಗಳು ಸರ್ವತೋಮುಖ ಬೆಳವಣಿಗೆಯಾದರೆ ಮಾತ್ರ ಮುಂದುವರೆಯಲು ಸಾಧ್ಯ. ವಿದ್ಯಾರ್ಥಿಗಳು ಪ್ರಾಪ್ತವಯಸ್ಕರಾಗುವವರೆಗೆ ಪೋಷಕರು ಹೇಳಿದಂತೆ ಕೇಳಿದರೆ ಸಾಕು ತಮ್ಮ ಭವಿಷ್ಯದ ದಿನಗಳನ್ನು ಸಂತೋಷದಿಂದ ಕಳೆಯುಬಹುದು" ಎಂದು ಅಭಿಪ್ರಾಯಪಟ್ಟರು.

ಪ್ರಭಾರ ಮುಖ್ಯೋಪಾಧ್ಯಾಯರಾದ ಶ್ರೀ ಎಂ. ಕಾಂತರಾಜುರವರು ಸ್ವಾಗತಿಸಿದರು. ಕು. ಸಂಸ್ಕೃತಿ ಮತ್ತು ತಂಡದವರು ಪ್ರಾರ್ಥಿಸಿದರು. ಕು. ಹೇಮಲಕ್ಷ್ಮಿ ಮತ್ತು ಕು. ಸ್ಫೂರ್ತಿಯವರು ವಿವಿಧ ಸಂಘಗಳ ವರದಿಗಳನ್ನು ಮಂಡಿಸಿದರು. ಕು. ಸಿಂಚನ ವಂದಿಸಿದರು. ಕು. ಲೀಲಾ ವರ್ಷಿಣಿ ನಿರೂಪಿಸಿದರು. ನಂತರ ವಿದ್ಯಾರ್ಥಿಗಳು ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು.

# ಅರ್ಹತಾಪತ್ರ ವಿತರಣೆ

**ಮರಿಯಾಲದ ಜೆಎಸ್‌ಎಸ್ ನೈಪುಣ್ಯತಾ ತರಬೇತಿ ಸಂಸ್ಥೆಯಲ್ಲಿ** ಚಾಮರಾಜನಗರ ಜಿಲ್ಲಾ ಪಂಚಾಯತ್‌ನ ಖಾದಿ ಮತ್ತು ಗ್ರಾಮೋದ್ಯೋಗ ವಿಭಾಗದ ಸಹಯೋಗದೊಡನೆ ಕಂಪ್ಯೂಟರ್ ಹಾಗೂ ಬ್ಯುಟಿಷಿಯನ್ ಕೋರ್ಸ್‌ಗಳಲ್ಲಿ ತರಬೇತಿ ಪಡೆದ ಫಲಾನುಭವಿಗಳಿಗೆ ದಿನಾಂಕ 28.6.2018ರಂದು ಅರ್ಹತಾ ಪತ್ರ ವಿತರಣಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ತರಬೇತಿ ಅರ್ಹತಾ ಪತ್ರ ವಿತರಿಸಿ ಮಾತನಾಡಿದ ಚಾಮರಾಜನಗರ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ. ಹರೀಶ್ ಕುಮಾರ್‌ರವರು "ಸ್ವಂತ ಉದ್ಯೋಗದಿಂದ ನೆಮ್ಮದಿಯ ಜೀವನ ನಡೆಸಬಹುದು. ಜೊತೆಗೆ ವೃತ್ತಿ ಸ್ವಾತಂತ್ರ್ಯದಿಂದಾಗಿ ಹೆಚ್ಚಿನ ಪ್ರಗತಿ ಹೊಂದಬಹುದಾಗಿದೆ. ಹೀಗಾಗಿ ಯುವ ಜನಾಂಗ ಸ್ವಂತ ಉದ್ಯೋಗದ ಕಡೆ ಹೆಚ್ಚು ಆಸಕ್ತಿ ವಹಿಸಬೇಕು. ಕರ್ನಾಟಕ ರಾಜ್ಯವು ಸಂಪನ್ಮೂಲವನ್ನು ಕ್ರೋಡೀಕರಣ ಮಾಡಿಕೊಂಡು ಸ್ವಂತ ಉದ್ಯೋಗದಲ್ಲಿ ತೊಡಗಿಸಿಕೊಳ್ಳಲು ಸಹಕಾರಿಯಾಗಿದೆ. ಇಲಾಖೆಯಿಂದ ನೀಡುವ ತರಬೇತಿಯನ್ನು ಪಡೆದು ನೈಪುಣ್ಯತೆಯನ್ನು ಸಾಧಿಸಿ, ಸ್ವಂತ ಉದ್ಯಮ ಕೈಗೊಂಡರೆ ಆರ್ಥಿಕ, ಶೈಕ್ಷಣಿಕ ಹಾಗೂ ಸಾಮಾಜಿಕ ಪ್ರಗತಿಯನ್ನು ಹೊಂದಲು ಸಾಧ್ಯವಿದೆ. ರಾಜ್ಯದ ಆರು ಕೋಟಿ ಜನರಲ್ಲಿ ಆರು ಲಕ್ಷ ಮಂದಿಗೆ ಮಾತ್ರ ಸರ್ಕಾರಿ ಉದ್ಯೋಗ ದೊರೆಯಲು ಸಾಧ್ಯ. ಹೀಗಾಗಿ ವಿದ್ಯಾಭ್ಯಾಸದ ಬಳಿಕ ಆಸಕ್ತಿ ಇರುವ ಕಡೆ ಸ್ವ ಉದ್ಯೋಗವನ್ನು ಕೈಗೊಳ್ಳಲು ಮುಂದಾಗಬೇಕು" ಎಂದು ಸಲಹೆ ನೀಡಿದರು.

ಜಿಲ್ಲಾ ಪಂಚಾಯಿತಿ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿಯ ಅಧ್ಯಕ್ಷರಾದ ಕೆರೆಹಳ್ಳಿ ಶ್ರೀ ನವೀನ್‌ರವರು ಮಾತನಾಡಿ "ತರಬೇತಿ ಪಡೆದಿರುವವರು ಬ್ಯಾಂಕ್‌ನಿಂದ ಸಾಲಸೌಲಭ್ಯವನ್ನು ಪಡೆದು ಸ್ವಂತ ಉದ್ಯೋಗ ಕೈಗೊಂಡು ಇತರರಿಗೂ ಉದ್ಯೋಗವನ್ನು ನೀಡುವ ಮಟ್ಟಕ್ಕೆ ಬೆಳೆಯಬೇಕು. ಈ ನಿಟ್ಟಿನಲ್ಲಿ ತಾಲ್ಲೂಕು ಮಟ್ಟದಲ್ಲಿ ನಡೆಯುತ್ತಿರುವ ತರಬೇತಿ ಕೇಂದ್ರಗಳನ್ನು ಹೋಬಳಿ ಮಟ್ಟಕ್ಕೆ ವಿಸ್ತರಣೆ ಮಾಡಲು ಚಿಂತನೆ ಮಾಡಲಾಗಿದೆ" ಎಂದರು.

ಇಲಾಖೆ ಉಪನಿರ್ದೇಶಕ ಶ್ರೀ ಕೆ.ಎ.ರಾಜೇಂದ್ರ ಪ್ರಸಾದ್‌ರವರು ಮಾತನಾಡಿ "ಸ್ವಂತ ಉದ್ಯೋಗದಲ್ಲಿ ತೊಡಗಿಸಿಕೊಂಡವರಿಗೆ ಹೆಚ್ಚಿನ ಪ್ರಗತಿ ಹೊಂದಲು ವಿಪುಲ ಅವಕಾಶವಿದೆ. ಉನ್ನತ ಮಟ್ಟಕ್ಕೆ ಹೋಗುವ ಎಲ್ಲಾ ರೀತಿಯ ಅವಕಾಶ ಮತ್ತು ಸಮಯ ಇರುತ್ತದೆ. ಶ್ರಮ ಮತ್ತು ಬುದ್ಧಿವಂತಿಕೆಯನ್ನು ಉಪಯೋಗಿಸಿ ಜೀವನದಲ್ಲಿ ಮೇಲೇರಲು ಎಲ್ಲರೂ ಚಿಂತನೆ ಮಾಡಬೇಕು. ಕಳೆದ ಎರಡು ವರ್ಷದಿಂದ ನಮ್ಮ ಇಲಾಖೆಯ ತರಬೇತಿಗಳನ್ನು ಈ ಸಂಸ್ಥೆಗೆ ನೀಡುತ್ತಿದ್ದು, ಉತ್ತಮವಾಗಿ ತರಬೇತಿಯನ್ನು ನೀಡುತ್ತಿದ್ದಾರೆ" ಎಂದು ಶ್ಲಾಘಿಸಿದರು.

ಪ್ರಾಂಶುಪಾಲರಾದ ಶ್ರೀ ಬಿ.ಸಿ. ಈರಪ್ಪಾಜಿ ಪ್ರಾಸ್ತಾವಿಕ ನುಡಿಗಳನ್ನಾಡಿ ಸಂಸ್ಥೆಯಲ್ಲಿ ನಡೆಸಿರುವ ಹಾಗೂ ನಡೆಯುತ್ತಿರುವ ತರಬೇತಿ ಕಾರ್ಯಕ್ರಮಗಳ ಬಗ್ಗೆ ವಿವರಿಸಿದರು. ಕಾರ್ಯಕ್ರಮದಲ್ಲಿ ತಾಲ್ಲೂಕು ಪಂಚಾಯಿತಿ ಸದಸ್ಯ ಶ್ರೀ ರೇವಣ್ಣ, ಕೈಗಾರಿಕಾ ವಿಸ್ತರಣಾಧಿಕಾರಿ ಪುಷ್ಪಲತಾ, ಸಂಸ್ಥೆಯ ಅಧೀಕ್ಷಕ ಶ್ರೀ ಕೆ.ಎನ್. ಶಶಿಧರ್, ಶ್ರೀ ಎನ್. ಮಹದೇವಸ್ವಾಮಿ, ಶಿಕ್ಷಕರು ಹಾಗೂ ಫಲಾನುಭವಿಗಳು ಹಾಜರಿದ್ದರು.

## ವಿದ್ಯಾರ್ಥಿಗಳು ಸಂಸ್ಕಾರಯುತ ಶಿಕ್ಷಣ ಪಡೆಯಬೇಕು - ಶ್ರೀ ಡ್ಯಾನಿ ಪೆರೇರಾ

"ಪ್ರತಿಯೊಬ್ಬ ವಿದ್ಯಾರ್ಥಿಯೂ ಸಮಾಜದಲ್ಲಿ ಆದರ್ಶ ವ್ಯಕ್ತಿಯಾಗಿ ರೂಪುಗೊಂಡು ಸಮಾಜದ ಲೋಪದೋಷಗಳನ್ನು ಸರಿಪಡಿಸುವ ಕಾರ್ಯದಲ್ಲಿ ತೊಡಗಿಕೊಳ್ಳಬೇಕು" ಎಂದು ಹಳ್ಳಿಮೈಸೂರಿನ ಅನುಗ್ರಹ ವಿದ್ಯಾಸಂಸ್ಥೆಯ ಮುಖ್ಯಸ್ಥರು ಹಾಗೂ 'ವಿಜಯವಾಣಿ' ಪತ್ರಿಕೆಯ ಅಂಕಣಕಾರರೂ ಆದ ಶ್ರೀ ಡ್ಯಾನಿ ಪೆರೇರಾ ತಿಳಿಸಿದರು.

**ಸಕಲೇಶಪುರದ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನಲ್ಲಿ** ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭ ಹಾಗೂ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಸಮಾರಂಭದಲ್ಲಿ ಮಾತನಾಡಿದ ಅವರು "ಆಧುನಿಕ ಯುಗ ಬಹಳ ಪೈಪೋಟಿಯಿಂದ ಕೂಡಿದೆ. ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣದೊಂದಿಗೆ ಸಂಸ್ಕಾರಯುತ ಶಿಕ್ಷಣದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಲ್ಲಿ ಹೆಚ್ಚಿನದನ್ನು ಸಾಧಿಸಲು ಸಾಧ್ಯವಾಗುತ್ತದೆ. ಭಾರತೀಯ ಸಂಸ್ಕೃತಿ. ಪರಂಪರೆಗೆ ವಿಶಿಷ್ಟವಾದ ಸ್ಥಾನವಿದೆ. ಇದನ್ನು ವಿದ್ಯಾರ್ಥಿಗಳು ಉಳಿಸಿಕೊಂಡು ಹೋಗಬೇಕು. ವಿಲಾಸಿ ಜೀವನಕ್ಕೆ ಮಾರು ಹೋಗದೆ ದೂರದೃಷ್ಟಿಯಿಂದ ಸಂಸ್ಕಾರಯುತ ಶಿಕ್ಷಣ ಪಡೆಯುವಂತಾಗಬೇಕು" ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಜೆಎಸ್‌ಎಸ್ ಬಿ.ಇಡಿ. ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎನ್.ಎಸ್. ಸುರೇಶ್‌ರವರು ಮಾತನಾಡುತ್ತಾ "ಪಠ್ಯದ ಜೊತೆ ಮಾನವೀಯ ಮೌಲ್ಯಗಳನ್ನು ಬಿತ್ತುವ ಶಿಕ್ಷಣ ನೀಡಬೇಕು. ತಾಯಿಯ ಮಹತ್ವದ ಬಗ್ಗೆ ಅರಿವು ಮೂಡಿಸಬೇಕು. ವೇಗವಾಗಿ ಬೆಳೆಯುತ್ತಿರುವ ಜಗತ್ತಿನಲ್ಲಿ ಸಂಬಂಧಗಳ ಬೆಲೆ ಕಡಿಮೆಯಾಗುತ್ತಿದೆ. ಈ ಬಗ್ಗೆ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವ ಕೆಲಸವನ್ನು ಎಲ್ಲಾ ಶಿಕ್ಷಣಸಂಸ್ಥೆಗಳು ಮಾಡಬೇಕು" ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್.ಎನ್. ನಾಗೇಂದ್ರಪ್ರಸಾದ್‌ರವರು ಮಾತನಾಡುತ್ತಾ "ವಿದ್ಯಾರ್ಥಿಜೀವನ ಎನ್ನುವುದು ಬದುಕನ್ನೇ ಬದಲಾಯಿಸುವ ಅಂಕುಶವಿದ್ದಂತೆ. ವಿದ್ಯಾರ್ಥಿ ಜೀವನದಲ್ಲಿ ಉತ್ತಮ ವಿಚಾರಧಾರೆಗಳನ್ನು ಮೈಗೂಡಿಸಿಕೊಂಡು ಸಮಾಜ ಮೆಚ್ಚುವ ವ್ಯಕ್ತಿಗಳಾಗಿ ರೂಪುಗೊಳ್ಳಬೇಕು" ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ 2017-18ನೇ ಸಾಲಿನ ದ್ವಿತೀಯ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ 19 ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಪದವಿ ಪೂರ್ವ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಹಾಜರಿದ್ದರು.

☐

## ಪರಿಚಯ ಕಾರ್ಯಕ್ರಮ

ಮೈಸೂರಿನ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್‌ನಲ್ಲಿ 2018-19ನೇ ಸಾಲಿನ ಪ್ರಥಮ ವರ್ಷದ ವಿದ್ಯಾರ್ಥಿಗಳಿಗೆ ಪರಿಚಯಾತ್ಮಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ವಿದ್ಯಾರ್ಥಿಗಳಿಗೆ ಪಾಲಿಟೆಕ್ನಿಕ್‌ನ ಬಗ್ಗೆ ಹಾಗೂ ಅವರಿಗೆ ಇಲ್ಲಿ ಸಿಗುವ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯು ದಿನಾಂಕ 2.7.2018ರಂದು ನೆರವೇರಿತು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಎಲ್ಲಾ ವಿಭಾಗಗಳ ಮುಖ್ಯಸ್ಥರು ಹಾಗೂ ಸಿಬ್ಬಂದಿವರ್ಗದವರ ಕಿರುಪರಿಚಯವನ್ನು ಮಾಡಿಕೊಡಲಾಯಿತು.

ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮೈಸೂರಿನ ಕುವೆಂಪುನಗರದಲ್ಲಿರುವ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀಮತಿ ಟಿ. ನಾಗವೇಣಿಯವರು ಮಾತನಾಡಿ "ಅಂಗವೈಕಲ್ಯ ಎಂಬುದು ಕೇವಲ ಒಂದು ಗುರುತು ಮಾತ್ರವಾಗಿದ್ದು ಅದನ್ನು ಲಕ್ಷಿಸದೆ, ನಾವೆಲ್ಲ ಸಮರ್ಥರು, ಎಲ್ಲವೂ ನಮ್ಮಿಂದ ಸಾಧ್ಯ ಎಂದು ತಿಳಿಯಬೇಕು. ಯಶಸ್ಸನ್ನು ಪಡೆಯಬೇಕಾದರೆ ಶ್ರದ್ಧೆ, ಪ್ರಯತ್ನ ಮತ್ತು ಗುರಿ ಇವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ವಿಶೇಷಚೇತನರಾಗಿದ್ದು, ಸಾಧನೆಯ ಶಿಖರವನ್ನು ಏರಿದ ಹೆಲೆನ್ ಕೆಲ್ಲರ್, ಪ್ರೊ. ಸ್ಟೀಫನ್ ಹಾಕಿಂಗ್, ಅರುಣಿಮಾ ಸಿನ್ಹಾ, ಲೂಯಿ ಬ್ರೈಲ್, ಮಾಲತಿ ಹೊಳ್ಳ ಮುಂತಾದವರ ಸಾಧನೆ, ಬದುಕು ನಿಮಗೆಲ್ಲ ಸ್ಫೂರ್ತಿಯಾಗಿರಲಿ. ಜೆಎಸ್ಎಸ್ ಆಡಳಿತಮಂಡಳಿಯು ನಿಮಗಾಗಿಯೇ ನೀಡಿರುವ ಈ ಸಂಸ್ಥೆಯ ಸೌಲಭ್ಯವನ್ನು ಸದುಪಯೋಗಪಡಿಸಿಕೊಳ್ಳಿ. ಉತ್ತಮವಾಗಿ ಓದಿ ಸಮಾಜದಲ್ಲಿ ಉನ್ನತ ಸ್ಥಾನವನ್ನು ಪಡೆಯಿರಿ " ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಶ್ರವಣದೋಷವುಳ್ಳ ಮಕ್ಕಳ ಅನುಕೂಲಕ್ಕಾಗಿ ಅಮೆರಿಕನ್ ಸೈನ್ ಲಾಂಗ್ವೇಜ್ ಮತ್ತು ಇಂಡಿಯನ್ ಸೈನ್ ಲಾಂಗ್ವೇಜ್‌ಗಳ ಬಗ್ಗೆ ವಿವರಿಸಲಾಯಿತು.

ಆರೋಗ್ಯ ಕೇಂದ್ರದಲ್ಲಿನ ಸೇವೆಗಳು, ಸಿಂಡಿಕೇಟ್ ಬ್ಯಾಂಕ್ ಸೌಲಭ್ಯ, ರಾಷ್ಟ್ರೀಯ ಸೇವಾ ಯೋಜನೆಯ ಮಹತ್ವ, ಗ್ರಂಥಾಲಯದ ಸೌಲಭ್ಯ, ಪಾಲಿಟೆಕ್ನಿಕ್‌ನ ಕಛೇರಿಯಲ್ಲಿ ವಿದ್ಯಾರ್ಥಿಗಳು ಪಡೆಯಬಹುದಾದ ಸೇವೆಗಳು, ಹಾಗೂ ವಿದ್ಯಾರ್ಥಿನಿಲಯದ ನಿಯಮಗಳ ಬಗ್ಗೆ ಮಾಹಿತಿ ನೀಡಲಾಯಿತು. ಅಲ್ಲದೆ ಸ್ಪೀಚ್‌ಥೆರಪಿಯ ಬಗ್ಗೆಯೂ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲಾಯಿತು. ಇದರ ಜೊತೆಗೆ ಈ ಕಾಲೇಜಿನಲ್ಲಿ ಓದಿ ಸ್ವಂತ ಜೀವನವನ್ನು ರೂಪಿಸಿಕೊಂಡು ವಿವಿಧ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವ ಹಿರಿಯ ವಿದ್ಯಾರ್ಥಿಗಳು ತಮ್ಮ ಅನುಭವವನ್ನು ಹಂಚಿಕೊಂಡು ನೂತನ ವಿದ್ಯಾರ್ಥಿಗಳಿಗೆ ಸ್ಫೂರ್ತಿ ತುಂಬಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಸಿ. ನಿರುಪಮ ರವರು ಮಾತನಾಡಿ "ವಿದ್ಯಾರ್ಥಿಗಳು ಮೂರು ವರ್ಷಗಳ ಅವಧಿಯಲ್ಲಿ ಈ ಪಾಲಿಟೆಕ್ನಿಕ್‌ನಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಬಳಸಿಕೊಂಡು, ಉತ್ತಮವಾಗಿ ಓದಿ, ಸ್ವಾವಲಂಬಿಗಳಾಗಿ. ಶಿಸ್ತನ್ನು ರೂಢಿಸಿಕೊಂಡು ಸಮಯ ಪಾಲನೆಗೆ ಹೆಚ್ಚು ಮಹತ್ವ ನೀಡಿ, ಕಷ್ಟಪಟ್ಟು ವ್ಯಾಸಂಗ ಮಾಡಿ ಪಾಲಿಟೆಕ್ನಿಕ್‌ಗೆ, ತಂದೆ ತಾಯಿಗಳಿಗೆ ಒಳ್ಳೆಯ ಹೆಸರನ್ನು ತನ್ನಿ. ಪಾಲಿಟೆಕ್ನಿಕ್‌ನ ಆವರಣದಲ್ಲಿ ಶುಚಿತ್ವವನ್ನು ಕಾಪಾಡಲು ಆದ್ಯತೆ ನೀಡಿ" ಎಂದರು.

ಕಾರ್ಯಕ್ರಮದಲ್ಲಿ ಕು. ಎಸ್. ಸುನಿತ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀ ಎನ್.ಎಂ. ಶಿವಕುಮಾರಸ್ವಾಮಿಯವರು ಸ್ವಾಗತಿಸಿದರು. ಶ್ರೀ ಕೆ. ಮಹದೇವಸ್ವಾಮಿ ಪ್ರತಿಜ್ಞಾವಿಧಿ ಬೋಧಿಸಿದರು. ಶ್ರೀ ಎಂ.ಬಿ. ರಘು ವಂದಿಸಿದರು. ಡಾ. ಪಳನಿಸ್ವಾಮಿ ಮೂಡುಗೂರುರವರು ಕಾರ್ಯಕ್ರಮವನ್ನು ನಿರೂಪಿಸಿದರು.

---

## ಸಾಂಸ್ಕೃತಿಕ, ಸಾಹಿತ್ಯಕ ಹಾಗೂ ಕ್ರೀಡಾವೇದಿಕೆಗಳ ಉದ್ಘಾಟನೆ

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್ಎಸ್ ಮಹಿಳಾ ಪದವಿಪೂರ್ವ ಕಾಲೇಜಿನಲ್ಲಿ** ದಿನಾಂಕ 18.7.2018ರಂದು ಸಾಂಸ್ಕೃತಿಕ, ಸಾಹಿತ್ಯಕ ಹಾಗೂ ಕ್ರೀಡಾ ವೇದಿಕೆಗಳ ಉದ್ಘಾಟನಾ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು. ಉದ್ಘಾಟನಾ ಭಾಷಣ ಮಾಡಿದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಪ್ರಾಧ್ಯಾಪಕಿ ಡಾ. ಜ್ಯೋತಿ ಶಂಕರ್‌ರವರು ಮಾತನಾಡುತ್ತಾ "ಜನರಲ್ಲಿ ಸಹಬಾಳ್ವೆ ನಡೆಸಲು ಹಾಗೂ ಅಸೂಯೆಯನ್ನು ಹೋಗಲಾಡಿಸಲು ಕ್ರೀಡೆಗಳು ಉಪಯುಕ್ತವಾಗಿವೆ. ಗ್ರಾಮೀಣ ಕ್ರೀಡೆಗಳಾದ ಕುಂಟೇಬಿಲ್ಲೆ, ಲಗೋರಿ,

ಚಿನ್ನಿದಾಂಡು ಇನ್ನಿತರ ಕ್ರೀಡೆಗಳು ಇಂದು ನಶಿಸುತ್ತಿರುವುದು ವಿಷಾದನೀಯ ಸಾಂಸ್ಕೃತಿಕ ಚಟುವಟಿಕೆಗಳೊಂದಿಗೆ ಸಾಹಿತ್ಯವನ್ನು ಸೇರಿಸಿರುವುದಕ್ಕೆ ಸಂತಸವಾಗಿದೆ. ವಿದ್ಯಾರ್ಥಿನಿಯರು ಓದಿನ ಜೊತೆಗೆ ಸಾಹಿತ್ಯ, ಕಲೆ, ಕ್ರೀಡೆಗಳನ್ನು ಅಳವಡಿಸಿಕೊಂಡಾಗ ಮಾತ್ರ ಪರಿಪೂರ್ಣ ವ್ಯಕ್ತಿಗಳಾಗಲು ಸಾಧ್ಯ. ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಲು ಇಂತಹ ವೇದಿಕೆಗಳು ಬಹಳ ಮುಖ್ಯವಾದುವು" ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಎಕ್ಸೆಲ್ ಪಬ್ಲಿಕ್ ಶಾಲೆಯ ದೈಹಿಕ ಶಿಕ್ಷಕಿ ಹಾಗೂ ಅಂತಾರಾಷ್ಟ್ರೀಯ ಕುಸ್ತಿಪಟುವಾದ ಕು. ರೀಟಾ ಪ್ರಿಯಾಂಕರವರು ಮಾತನಾಡಿ "ನನ್ನ ಸಾಧನೆಯ ಹಿಂದೆ ಅನೇಕರ ಪ್ರೋತ್ಸಾಹವಿದೆ. ನನಗೆ ಇಂದು ಸಿಗುತ್ತಿರುವ ಗೌರವವೆಲ್ಲ ಅವರಿಗೆ ಸಲ್ಲಬೇಕಾದದ್ದು. ಮಹಿಳೆಯರು ತಮ್ಮನ್ನು ರಕ್ಷಿಸಿಕೊಳ್ಳಲು ದೈಹಿಕ ಸಾಮರ್ಥ್ಯ ಬಹಳ ಮುಖ್ಯವಾದುದು. ಮಹಿಳೆಯರು ಕುಸ್ತಿ ಮಾಡಿದರೆ ಅವಹೇಳನ ಮಾಡುವಂತಹ ಪರಿಸ್ಥಿತಿ ಇರುವಾಗ ನನ್ನ ಪೋಷಕರು ನನಗೆ ಪ್ರೋತ್ಸಾಹ ನೀಡಿದ ಕಾರಣ ಇಂದು ನಾನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಳ್ಳುವಂತಾಯಿತು. ಜೆಎಸ್‌ಎಸ್ ಸಂಸ್ಥೆ ಒಂದು ಪ್ರತಿಷ್ಠಿತ ಸಂಸ್ಥೆಯಾಗಿದ್ದು ಇಲ್ಲಿ ಅಭ್ಯಾಸ ಮಾಡುವ ಎಲ್ಲರೂ ಭಾಗ್ಯವಂತರು" ಎಂದು ತಿಳಿಸಿ ವಿದ್ಯಾರ್ಥಿನಿಯರಿಗೆ ಶುಭಕೋರಿದರು.

□

---

## ತಾಲ್ಲೂಕು ಮಟ್ಟದ ವಚನ ಗಾಯನ ಸ್ಪರ್ಧೆ

**ಮಾಲೂರಿನ ಜೆಎಸ್‌ಎಸ್ ಗಾಯತ್ರಿ ಪ್ರೌಢಶಾಲೆಯಲ್ಲಿ** ದಿನಾಂಕ 27.7.2018ರಂದು ಪರಮಪೂಜ್ಯ ಜಗದ್ಗುರು ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 103ನೆಯ ಜಯಂತಿ ಮಹೋತ್ಸವದ ಅಂಗವಾಗಿ ತಾಲ್ಲೂಕು ಮಟ್ಟದ ವಚನ ಗಾಯನ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ಪ್ರಾಸ್ತಾವಿಕ ಮಾತುಗಳನ್ನಾಡಿದ ಮಾಲೂರಿನ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಯೋಜನಾಧಿಕಾರಿಗಳಾದ ಶ್ರೀ ಎಸ್.ಎಚ್. ಮಹೇಶ್ವರಪ್ಪನವರು "12ನೆಯ ಶತಮಾನದಲ್ಲಿ ಬಸವೇಶ್ವರರ ನೇತೃತ್ವದಲ್ಲಿ ಎಲ್ಲ ಶರಣರು ಒಗ್ಗೂಡಿ ಜಾತಿ, ಮತ ಮತ್ತು ಸ್ತ್ರೀ-ಪುರುಷ ಭೇದವಿಲ್ಲದ ಸಮಾನತೆಯ ಸಮಾಜಕ್ಕಾಗಿ ಹೋರಾಡಿದರು. ಅನುಭವ ಮಂಟಪದಲ್ಲಿ ಅಲ್ಲಮಪ್ರಭುಗಳ ಅಧ್ಯಕ್ಷತೆಯಲ್ಲಿ ಸೇರಿ ಸರಳ ಕನ್ನಡದಲ್ಲಿ ವಚನಗಳನ್ನು ರಚಿಸಿ ಸರ್ವರಿಗೂ ತಲುಪಿಸಿ ಅದರ ಬಗ್ಗೆ ಅರಿವು ಮೂಡಿಸಿದರು. ಅಂತೆಯೇ ಪೂಜ್ಯ ಡಾ. ರಾಜೇಂದ್ರ ಶ್ರೀಗಳು ಶರಣ ಸಾಹಿತ್ಯ ಪರಿಷತ್ತನ್ನು ಪ್ರಾರಂಭಿಸುವುದರ ಮೂಲಕ ಶಿವಶರಣರ ವಚನ ತತ್ವಗಳು ಜನಸಾಮಾನ್ಯರಿಗೆ ತಲುಪುವಂತೆ ಮಾಡಿದರು" ಎಂದರು.

ಅಖಿಲ ಭಾರತ ವೀರಶೈವ ಮಹಾಸಭಾದ ಕೋಲಾರ ಜಿಲ್ಲೆ ಉಪಾಧ್ಯಕ್ಷರೂ ಹಾಗೂ ಶ್ರೀ ಜಗಜ್ಯೋತಿ ಬಸವೇಶ್ವರ ಅಭಿವೃದ್ಧಿ ಸಮಿತಿ ಅಧ್ಯಕ್ಷರಾದ ಶ್ರೀ ಟಿ.ಸಿ. ನಾಗರಾಜುರವರು ಮಾತನಾಡಿ "ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಸಮಾಜದ ಬಡತನವನ್ನು ಅರಿತು ಬಡ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ತಮ್ಮ ಕೊರಳಲ್ಲಿರುವ ಕರಡಿಗೆಯನ್ನು ಮಾರಿ ಹಾಸ್ಟೆಲ್ ಆರಂಭಿಸಿದರು. ಇಂದು ಜೆಎಸ್‌ಎಸ್ ಸಂಸ್ಥೆ ಎಲ್ಲಾ ಕ್ಷೇತ್ರಗಳಲ್ಲೂ ಪ್ರಗತಿಯನ್ನು ಸಾಧಿಸಿ ದೇಶ ವಿದೇಶಗಳಲ್ಲಿ ಸೇವೆ ಸಲ್ಲಿಸುತ್ತಿದೆ. ಈ ಸಂಸ್ಥೆಯಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳಲ್ಲಿ ಶಿಸ್ತು ಮತ್ತು ಸಂಸ್ಕಾರ ಇರುತ್ತದೆ. ಜೊತೆಗೆ ಉದ್ಯೋಗಗಳಲ್ಲಿ ಉತ್ತಮ ಅವಕಾಶ ಪಡೆಯುತ್ತಾರೆ. ಇಂತಹ ಸಂಸ್ಥೆ ನಮ್ಮ ಊರಿನಲ್ಲಿರುವುದು ನಮ್ಮೆಲ್ಲರ ಸೌಭಾಗ್ಯ" ಎಂದರು.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷರಾದ ಶ್ರೀ ಷಣ್ಮುಖಯ್ಯನವರು ಮಾತನಾಡಿ "ಜನರಲ್ಲಿ ಅರಿವು ಮೂಡಿಸಿದ ಶರಣರು ಕಾಯಕಕ್ಕೆ ನೀಡಿದ ಮಹತ್ವ ಅಪಾರ. ಅದನ್ನು ಸಾಕಾರಗೊಳಿಸುವಲ್ಲಿ

ಜೆಎಸ್‌ಎಸ್ ಸಂಸ್ಥೆ ಸದಾ ಶ್ರಮಿಸುತ್ತಿದೆ" ಎಂದರು.

ಪುರಸಭೆ ಸದಸ್ಯರಾದ ಶ್ರೀ ಲಿಂಗೇಶ್ವರಯ್ಯನವರು ಮಾತನಾಡಿ "ಜೆಎಸ್‌ಎಸ್ ಸಂಸ್ಥೆ ದೇಶ ವಿದೇಶಗಳಲ್ಲಿ ಸಂಸ್ಥೆಗಳನ್ನು ತೆರೆದು ಅನ್ನ, ಅಕ್ಷರ, ಆರೋಗ್ಯ ದಾಸೋಹಗಳನ್ನು ನಡೆಸಿಕೊಂಡು ಬರುತ್ತಿದೆ. ಇಂತಹ ಕಾರ್ಯಕ್ರಮಗಳು ಸಮಾಜಕ್ಕೆ ಅವಶ್ಯಕ" ಎಂದರು.

ಸಮಾರಂಭದಲ್ಲಿ ಶ್ರೀ ಕೆ.ಎಸ್. ಜಯಶೀಲ, ಶ್ರೀ ಎಂ. ನಾಗರಾಜು, ಶ್ರೀ ಮಲ್ಲಿಕಾರ್ಜುನಪ್ಪ ಉಪಸ್ಥಿತರಿದ್ದರು. ಶ್ರೀ ಬಿ.ಎನ್. ಚಂದ್ರಶೇಖರ್ ಮತ್ತು ಶ್ರೀಮತಿ ಕಮಲ ಸ್ಪರ್ಧೆಯ ತೀರ್ಪುಗಾರರಾಗಿದ್ದರು. ಮುಖ್ಯ ಶಿಕ್ಷಕರಾದ ಶ್ರೀ ಬಿ. ಶಿವಶಂಕರ್ ಸ್ವಾಗತಿಸಿದರು. ಕು. ಕಾವ್ಯ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀಮತಿ ಮೈನಾ ಮತ್ತು ಶ್ರೀ ಜೆ.ಇ. ಬಸವರಾಜಪ್ಪ ಕಾರ್ಯಕ್ರಮ ನಿರೂಪಿಸಿದರು.

ಮಾಲೂರು ತಾಲ್ಲೂಕಿನ 35 ಶಾಲೆಗಳಿಂದ 70 ವಿದ್ಯಾರ್ಥಿಗಳು ವಚನ ಗಾಯನ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

---



ಮೈಸೂರಿನ ಮುಕ್ತವಿಶ್ವವಿದ್ಯಾಲಯದಲ್ಲಿ ಏರ್ಪಡಿಸಿದ್ದ ಎನ್‌ಸಿಸಿ ವಾರ್ಷಿಕ ಶಿಬಿರದಲ್ಲಿ ಭಾಗವಹಿಸಿ ಸಮಗ್ರ ಪ್ರಶಸ್ತಿ ಪಡೆದ ಸುತ್ತೂರು ಜೆಎಸ್‌ಎಸ್ ಪ್ರೌಢಶಾಲೆಯ ಎನ್‌ಸಿಸಿ ಭೂದಳದ ಕೆಡೆಟ್‌ಗಳೊಂದಿಗೆ ೧೫ನೇ ಕರ್ನಾಟಕ ಬೆಟಾಲಿಯನ್ ಕಮಾಂಡರ್ ಕರ್ನಲ್ ಮನಜೀತ್‌ಸಿಂಗ್, ಕರ್ನಲ್ ಜಗದೀಶ್‌ನಾಯರ್ ಹಾಗೂ ಶಾಲಾ ಭೂದಳದ ಎನ್‌ಸಿಸಿ ಅಧಿಕಾರಿ ಶ್ರೀಮತಿ ಸಿ.ಪಿ. ನಿರ್ಮಲ ಮತ್ತಿತರರಿದ್ದಾರೆ

# ಸುತ್ತಮುತ್ತ

**ಮೈಸೂರಿನ ಜೆ.ಪಿ.ನಗರದಲ್ಲಿರುವ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನಲ್ಲಿ** ದಿನಾಂಕ 27.7.2018ರಂದು ಮೈಸೂರಿನ ಜಿಎಎಸ್‌ವೈಎಂ ಸಂಸ್ಥೆಯವರು ಮಹಾರಾಣಿ ಸ್ನಾತಕೋತ್ತರ ಕೇಂದ್ರದ ಸೂಕ್ಷ್ಮ ಜೀವಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಎಚ್.ಪಿ. ರಾಘುವೇಂದ್ರರವರಿಂದ 'ಮೈಕ್ರೋಬ್ಸ್ ಇನ್ ಹ್ಯುಮನ್ ವೆಲ್‌ಫೇರ್' ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ಏರ್ಪಡಿಸಿದ್ದರು. ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಶ್ರೀಮತಿ ಉಮಾಮಹೇಶ್ವರಿ, ಕನ್ನಡ ಉಪನ್ಯಾಸಕರಾದ ಶ್ರೀ ಎಸ್. ನಂದೀಶ್, ವಿಜ್ಞಾನ ವಿಭಾಗದ ಉಪನ್ಯಾಸಕರುಗಳು ಭಾಗವಹಿಸಿದ್ದರು.

**ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ** ದಿನಾಂಕ 27.7.2018ರಂದು ಏರ್ಪಡಿಸಲಾಗಿದ್ದ ಗುರುವಂದನಾ ಕಾರ್ಯಕ್ರಮದ ಸಮ್ಮುಖ ವಹಿಸಿದ್ದ ಬೆಳಗಾವಿ ಜಿಲ್ಲೆಯ ತಾರಿಹಾಳದ ಗವಿಸಿದ್ದೇಶ್ವರ ಮಠದ ಕಿರಿಯ ಶ್ರೀಗಳಾದ ಪೂಜ್ಯ ಅಡವೀಶ್ವರ ದೇವರು



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ ನಡೆದ ಗುರುವಂದನಾ ಕಾರ್ಯಕ್ರಮದಲ್ಲಿ ಪೂಜ್ಯ ಅಡವೀಶ್ವರ ದೇವರು ಮಾತನಾಡುತ್ತಿರುವುದು

ತಂದೆ, ತಾಯಿ, ಗುರು ಹಾಗೂ ದೈವದ ಮಹತ್ವವನ್ನು ತಿಳಿಸಿ ಗುರುಗಳನ್ನು ಸ್ಮರಿಸಿ, ಗೌರವಿಸುವ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದಕ್ಕಾಗಿ ಸಂತೋಷ ವ್ಯಕ್ತಪಡಿಸಿದರು. ಅಧ್ಯಕ್ಷತೆ ವಹಿಸಿದ್ದ ಮುಖ್ಯೋಪಾಧ್ಯಾಯರಾದ ಶ್ರೀ ಎ. ಕಾಂತರಾಜುರವರು ಮಾತನಾಡಿ "ವಿದ್ಯಾರ್ಥಿಗಳು ಗುರುವಂದನಾ ಕಾರ್ಯಕ್ರಮವನ್ನು ಆಯೋಜಿಸಿರುವುದು ಸಂತೋಷದ ವಿಷಯ. ಹಾಗೆಯೇ ಗುರುಹಿರಿಯರ ಬಗ್ಗೆ ಗೌರವ ಹೊಂದಿ ವಿಧೇಯತೆಯಿಂದ ವಿದ್ಯಾರ್ಜನೆ ಮಾಡಬೇಕು. ಆಗ ಮಾತ್ರ ಗುರಿ ಸಾಧಿಸಲು ಸಾಧ್ಯ" ಎಂದು ಹೇಳಿದರು. ಕು. ರಾಗಶ್ರೀ ಮತ್ತು ತಂಡದವರು ಪ್ರಾರ್ಥಿಸಿದರು. ಕು. ಸಿ. ಸಂಸ್ಕೃತಿ ಸ್ವಾಗತಿಸಿದರು. ಕು. ಯಶಸ್ವಿನಿ ವಂದಿಸಿದರು. ಕು. ದರ್ಶಿನಿ ನಿರೂಪಿಸಿದರು. ಶಾಲೆಯ ಶಿಕ್ಷಕವೃಂದ ಹಾಗೂ ಪೋಷಕರು ಉಪಸ್ಥಿತರಿದ್ದರು.

**ಮೈಸೂರಿನ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಮುಚ್ಚಯದಲ್ಲಿರುವ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್‌ನಲ್ಲಿ** ದಿನಾಂಕ 21.7.2018ರಂದು ಹೆಲೆನ್ ಕೆಲ್ಲರ್ ಜನ್ಮದಿನ ಆಚರಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಬೆಂಗಳೂರಿನ ವಿಪ್ರೋ ಟೆಕ್ನಾಲಜೀಸ್‌ನ ಸೀನಿಯರ್ ಎಕ್ಸಿಕ್ಯೂಟಿವ್ ಶ್ರೀ ಪಿ. ಶಿವಕುಮಾರ್‌ರವರು ಮಾತನಾಡುತ್ತಾ "ಹೆಲೆನ್ ಕೆಲ್ಲರ್ ಅವರು ಬಾಲ್ಯದಲ್ಲಿ ಅನೇಕ ಕಷ್ಟಗಳನ್ನು ಅನುಭವಿಸಿದರು. ಎಲ್ಲ ಕಷ್ಟಗಳನ್ನೂ ಮೀರಿ ನಿಂತು ಅವರು ಮಾಡಿದ ಸಾಧನೆ ನಮ್ಮೆಲ್ಲರಿಗೂ ಮಾದರಿ. ಎಲ್ಲಾ ವಿದ್ಯಾರ್ಥಿಗಳು ಕೆಲ್ಲರ್‌ರವರಂತೆ ಸಾಧನೆ ಮಾಡಬೇಕು" ಎಂದರು.

ಸಮಾರಂಭದಲ್ಲಿ ಉಪಸ್ಥಿತರಿದ್ದ ಮತ್ತೋರ್ವ ಮುಖ್ಯ ಅತಿಥಿಗಳಾದ ಮೈಸೂರಿನ ಮೈಸೂರು ಮಿಲ್ಕ್ ಯೂನಿಯನ್

ಲಿಮಿಟೆಡ್‌ನ ಡೆಪ್ಯುಟಿ ಮ್ಯಾನೇಜರ್ ಶ್ರೀ ಎನ್.ಜಿ. ಫಣಿರಾಜ್‌ರವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ ಹೆಲೆನ್ ಕೆಲ್ಲರ್‌ರವರ ಆದರ್ಶಗಳನ್ನು ಪಾಲಿಸುವಂತೆ ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್‌ನ ಪ್ರಾಂಶುಪಾಲರಾದ ಶ್ರೀ ನಂಜುಂಡಸ್ವಾಮಿ ಯವರು ಮಾತನಾಡುತ್ತಾ "ವಿದ್ಯಾರ್ಥಿಗಳು ಶ್ರದ್ಧೆಯಿಂದ ವ್ಯಾಸಂಗ ಮಾಡಿ ಉತ್ತಮ ಉದ್ಯೋಗವನ್ನು ಪಡೆದು ಸ್ವಾವಲಂಬಿಗಳಾಗಬೇಕು. ಇಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಸದುಪಯೋಗ ಪಡಿಸಿಕೊಂಡು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು" ಎಂದರು.

ಕು. ಎಚ್.ಎನ್. ಶಾಲಿನಿಯವರು ಪ್ರಾರ್ಥಿಸಿದರು. ಶ್ರೀ ರಾಕೇಶ್ ಮಧು ತೇಲಿ ಸ್ವಾಗತಿಸಿದರು. ಕು. ಆರ್. ತನುಜರವರು ಅತಿಥಿಗಳ ಪರಿಚಯ ಮಾಡಿಕೊಟ್ಟರು. ಕು. ಆರ್. ಕೌಸಲ್ಯ ಅವರು ಹೆಲೆನ್ ಕೆಲ್ಲರ್‌ರವರ ವ್ಯಕ್ತಿ ಪರಿಚಯ ಮತ್ತು ಸಾಧನೆಗಳ ಬಗ್ಗೆ ವಿವರಿಸಿದರು. ವಿದ್ಯಾರ್ಥಿನಿ ಕು. ಬಿ. ನಯನ ಕಾರ್ಯಕ್ರಮ ನಿರೂಪಿಸಿದರು. ಕು. ಸುನೀತ ವಂದಿಸಿದರು. ವಿದ್ಯಾರ್ಥಿನಿ ಕು. ಎನ್. ಜಯಶೀಲ ಸ್ಫೂರ್ತಿಗೀತೆ ಹಾಡಿದರು.

### ಚೆಸ್ ಮತ್ತು ಯೋಗ ಸ್ಪರ್ಧೆ: ವಿಭಾಗಮಟ್ಟಕ್ಕೆ ಆಯ್ಕೆ

ಮೈಸೂರಿನ ಮಾತೃಮಂಡಲಿ ಶಾಲೆಯಲ್ಲಿ ಇತ್ತೀಚಿಗೆ ನಡೆದ ಜಿಲ್ಲಾ ಮಟ್ಟದ ಚೆಸ್ ಸ್ಪರ್ಧೆಯಲ್ಲಿ ಸುತ್ತೂರಿನ ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಯಿಂದ ಏಳು ಜನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇವರಲ್ಲಿ ಏಳನೇ ತರಗತಿಯ ವಿದ್ಯಾರ್ಥಿನಿ ಕು. ಸಂಗೀತ ಗೋಲಗಿರಿಯಪ್ಪ ಪೂಜಾರ್ ವಿಭಾಗಮಟ್ಟಕ್ಕೆ ಆಯ್ಕೆಯಾಗಿದ್ದಾರೆ.



ಕು. ಸಂಗೀತ ಗೋಲಗಿರಿಯಪ್ಪ ಪೂಜಾರ್



ಚಿ. ಬಿ. ಅಭಿಷೇಕ್ ಮತ್ತು ಚಿ. ಪ್ರಶಾಂತ್ ಜಾವೋದರ್

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಶಾಲೆಯಲ್ಲಿ ನಡೆದ ಜಿಲ್ಲಾಮಟ್ಟದ ಯೋಗ ಸ್ಪರ್ಧೆಯಲ್ಲಿ ಸುತ್ತೂರು ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಯಿಂದ ಐವರು ವಿದ್ಯಾರ್ಥಿಗಳು ಭಾಗವಹಿಸಿದ್ದರು. ಇವರಲ್ಲಿ ಏಳನೇ ತರಗತಿಯ ವಿದ್ಯಾರ್ಥಿಗಳಾದ ಚಿ. ಬಿ. ಅಭಿಷೇಕ್ ಮತ್ತು ಚಿ. ಪ್ರಶಾಂತ್ ಜಾವೋದರ್ ವಿಭಾಗಮಟ್ಟಕ್ಕೆ ಆಯ್ಕೆಯಾಗಿದ್ದಾರೆ.

ಸಂಸ್ಥೆಯ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಪಿ. ಉದಯಶಂಕರ್, ಸಂಸ್ಥೆಗಳ ಮುಖ್ಯಸ್ಥರು, ಮುಖ್ಯೋಪಾಧ್ಯಾಯರಾದ ಶ್ರೀ ಬಿ.ಎಂ. ಸಿದ್ದಪ್ಪ, ಶ್ರೀ ಜಿ.ಎಂ. ಷಡಕ್ಷರಿ ಯವರು ವಿದ್ಯಾರ್ಥಿಗಳನ್ನು ಹಾಗೂ ತರಬೇತಿ ನೀಡಿದ ದೈಹಿಕ ಶಿಕ್ಷಕರನ್ನು ಅಭಿನಂದಿಸಿದ್ದಾರೆ.

### 'ಜಗನ್ಮಾತೆ ಅಕ್ಕಮಹಾದೇವಿ' ಕೃತಿ ಬಿಡುಗಡೆ

'ಶರಣು ವಿಶ್ವವಚನ ಫೌಂಡೇಶನ್'ರವರು ದಿನಾಂಕ 29.7.2018ರಂದು ಆಯೋಜಿಸಿದ್ದ ಕೃತಿಗಳ ಬಿಡುಗಡೆ ಕಾರ್ಯಕ್ರಮದಲ್ಲಿ ಶ್ರೀ ನಗರ್ಲೆ ಶಿವಕುಮಾರ ವಿರಚಿತ 'ಜಗನ್ಮಾತೆ ಅಕ್ಕಮಹಾದೇವಿ' ಪುಸ್ತಕವನ್ನು ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಹಿರಿಯ ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಜೆಎಸ್‌ಎಸ್ ಮಹಾವಿದ್ಯಾಪೀಠದ



ಜಗನ್ಮಾತೆ ಅಕ್ಕಮಹಾದೇವಿ ಕೃತಿಯನ್ನು ಡಾ. ಸಿ.ಪಿ.ಕೆ. ಯವರು ಲೋಕಾರ್ಪಣೆ ಮಾಡಿದರು

ಪ್ರಕಟಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನ, ಡಾ. ಪ್ರದೀಪ್ ಕುಮಾರ್ ಹೆಬ್ರಿ, ಶ್ರೀ ವಚನ ಕುಮಾರಸ್ವಾಮಿ ಮುಂತಾದವರು ಉಪಸ್ಥಿತರಿದ್ದರು. ಶ್ರೀ ನಗರ್ಲೆ ಶಿವಕುಮಾರ ಅವರು ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣ ವಿಭಾಗದಲ್ಲಿ ಸೇವೆಯಲ್ಲಿದ್ದಾರೆ.

## ಜಿಮ್ನಾಸ್ಟಿಕ್ ಸ್ಪರ್ಧೆಯಲ್ಲಿ ರಾಜ್ಯಮಟ್ಟಕ್ಕೆ ಆಯ್ಕೆ



ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಸಾರ್ವಜನಿಕ ಶಿಕ್ಷಣ ಇಲಾಖೆ ಯವರು ದಿನಾಂಕ 16.7.2018 ರಂದು ಆಯೋಜಿಸಿದ್ದ 14 ವರ್ಷದ ಒಳಗಿನ ಬಾಲಕಿಯರ ಜಿಲ್ಲಾ ಮಟ್ಟದ ಜಿಮ್ನಾಸ್ಟಿಕ್ ಸ್ಪರ್ಧೆಯಲ್ಲಿ **ಮೈಸೂರಿನ ರಾಮಾನುಜರಸ್ತೆಯಲ್ಲಿರುವ ಜೆಎಸ್‌ಎಸ್ ಪ್ರೌಢ ಶಾಲೆಯ (ಬಾಲಜಗತ್)** 6ನೇ ತರಗತಿ ವಿದ್ಯಾರ್ಥಿನಿ ಕು. ಆರ್. ಪ್ರೀತಿ ಪ್ರಥಮ ಸ್ಥಾನ ಪಡೆದು ರಾಜ್ಯಮಟ್ಟಕ್ಕೆ ಆಯ್ಕೆಯಾಗಿರುತ್ತಾಳೆ.

## ENGLISH SECTION

### Ethnic Day Celebrated

**JSS Public School, Mandya** celebrated the Ethnic Day in full pomp and splendour.

In the era of modernization and westernization, when most of the people are moving away from their own culture and history, events like Ethnic Day enable the young generation to revive love and respect for their own culture and history.

Ethnicity plays a major role in how students' personality is shaped when the little ones were provided with an opportunity to celebrate the diversity of vibrant and colourful India.



Students in their Ethnic Dress

In order to encourage the children and to hold their interest, prizes were given to the best three traditional wearers for each class and also for staff and teachers. The participants stole the show with their traditional wear and ethnic jewellery.



Students in their Ethnic Dress

It was indeed a pleasant break from the routine and the subtle major impact of "feel-good factor" had a very favourable effect on the blooming buds' emotional well-being.

***

### International Yoga Day Celebrated

International Day of Yoga is celebrated annually on 21st June since its inception in 2015. The Yoga Day was declared unanimously by the United Nations General Assembly. Yoga is a physical, mental and spiritual practice, originated in India.

Prime Minister Sri Narendra Modi, in his UN address, suggested that 21st June is the longest day of the year in the northern hemisphere and shares a

special significance in many parts of the world.

Yoga by students from 3rd Std to 8th Std

The International Yoga Day was celebrated on 21.6.2018 in the school premises. The programme commenced with a prayer followed by welcome speech by the Principal, Sri Kumaraswamy. The Chief Guest of the day, Smt. Shobhakka was introduced to the audience. She delivered her presidential speech wherein she explained about the origin and utility of yoga.

## Yoga by Our Guest Shobhakka

Yoga is a mental physical and spiritual practice that needs to be carried out every day. Children got the chance to know how yoga embodies unity of mind and body. The students of Classes 3–8, with their with teachers, performed different asanas under the guidance of Chief Guest, Smt. Shobhakka. The yoga session finally ended with Pranayama and Meditation. A prayer was recited after the programme as well.

***

## Investiture Ceremony held

To inculcate leadership qualities in students and to give them a feel of functioning of the administrative body, a School Council was formed at JSS Public School, Mandya and the Investiture Ceremony held on 29.6.2018.

The Chief Guest on the occasion was Sri Rudraswamy, Retired Police Sub-Inspector. Sri Kumaraswamy, Principal, was the Chief Guest.

The teachers anchored the programme while the Principal delivered the welcome address.

Miss M. Harini, Grade 8, was selected as the Head Girl.

Sri Hithesh, Grade 8, was selected as the Head Boy.

The Chief Guest gave the badges and sashes to the respective School Captains and Vice-Captains and the Principal administered the oath to the members of the Council.

Group Photo with Council members of School

In his address, the Chief Guest appreciated the efforts made by the



Oath Taking Ceremony of Students

school for providing opportunities to the students to take part in extra-curricular activities. He also congratulated the newly appointed members of the School Council for their preparedness to take up responsibilities.

The Principal proposed the Vote of Thanks.

***

## World Environment Day

**JSS Public School, Mandya** celebrated the World Environment Day on 5.6.2018 with great zeal and enthusiasm. The programme was inaugurated by Sri Somashekhar, Chairman, MSW Department, JSS College, Ooty Road, Mysuru.

He spoke as to how we can make changes in our day-to-day lives, reduce the plastic pollution and save our health and also revised few slogans relating to environmental issues.

Sri Kumaraswamy and Sri Somashekhar planted saplings

The Principal addressed the gathering on the occasion by focusing on underwater and on-land eco system, as well as on sustained use of marine and terrestrial resources. He conducted a quiz on "World Environment Day", with a questionnaire.

***

## Director's visit

Sri Kumaraswamy, Principal welcomed Sri Sreenivas Iyengar, Director of JSS Public Schools, JSS Mahavidyapeetha, who paid a visit to the school on 15.6.2018. Later on a workshop started off with a brainstorming session which ignited the creative thought-process of the teachers.

Director was welcomed by Sri Nagesh Achar

Director Addressed the School Assembly

Many interactive and fun-filled activities focused on creative methods of the teaching-learning process which can be adopted in the classroom. The importance of maintaining emotional balance, teamwork and co-operation in the classroom was highlighted.

***

## Workshop held

Stress was laid on having a positive attitude towards work and life which leads to a fulfilling and enjoyable life.

The teachers were benefitted a lot from the workshop and were motivated to have a positive outlook and implement them in their teaching.

***

## Workshop on "Data Analytics & Learning"

The Department of Information Science & Engineering, Sri Jayachamarajendra College of Engineering, Mysuru has, under the TEQIP III programme, organized a Three Day Workshop on "Data Analytics & Learning" from 5th - 7th July 2018.

The workshop was inaugurated on 5.7.2018 by Dr. T.N. Nagabhushan, Principal, SJCE. The event was co-ordinated by Dr. B.S. Harish, Associate Professor, Prof. C.K. Roopa and Prof. N. Manju.

Around 55 researchers and academicians from various parts of Karnataka registered for the workshop. Resource-persons and Subject Experts were invited from University of Mysore, JSS STU and Samsung, Bengaluru.

The workshop was planned for 12 sessions with both theory and demonstration sessions. The first session was handled by Dr. H.S. Nagendraswamy, who covered the basics of data and its different learning techniques. He touched upon the importance of employing machine learning techniques for the proper understanding of the data. The next session was taken up by Dr. Manjunath Aradhya, who explained about the supervised learning techniques. He gathered the participants' attention by detailing the various classifiers, with suitable examples. It was followed by

demonstration of various supervised learning techniques. The last session of the day was handled by Dr. S.V. Aruna Kumar, who briefed about the major theoretical aspects of the unsupervised learning.

The second day started with a demonstration of unsupervised learning techniques like K-means and variants of K-means. The session was handled by Dr. S.V. Aruna Kumar. The other two important sessions on Neural Networks, MLP and RB were handled by Dr. T.N. Naghabhushan and Dr. Trisiladevi C. Nagavi respectively. Dr. B.S. Mahananda handled a session on applications of Neural Network on Biomedical Images. The last session of the day was engaged by Dr. D.S. Guru on "Dimensionality Reduction Techniques".

The third day started with an introduction to deep learning and use of Tensor-flow Framework. The session was handled by Prof. Anandraj Ulle. The core part of Convolution Neural Network (CNN) was taken up at the next session by Dr. R. Dinesh of M/s. Samsung India, Bengaluru. The third session mainly concentrated on unsupervised feature learning techniques along with a bird's eyeview on Convolution Neural Network by Dr. S. Manjunath, M/s. Samsung India, Bengaluru. The speakers also demonstrated the working of CNN and Deep Nets with real time applications.

The last session was exclusive for panel discussion with experts, viz., Dr. D.S. Guru, Dr. S. Manjunath and Dr. D.S. Vinod. The session was very lively with participants' questions which were welcomed with proper interaction.

Finally a feedback from selected participants was shared at the workshop. The participants expressed their views like "Interaction with professionals is an important part of learning process".

***

## World Music Day

The World Music Day was celebrated 22.6.2018 at JSS Public School, Bage. This year's theme was "Karaoke". The programme started with a prayer,

followed by special thoughts about World Music Day and the theme 'Karaoke'. Students from 5th to 10th Std. entertained the audience by various programmes like dance, flute recital, mrudangam and karthal. Students also highlighted the theme by singing songs in Hindi, Kannada, English languages, with the help of karaoke box and keyboard.

## International Yoga Day

The International Yoga Day was celebrated on 21.6.2018 at JSS Public School, Bage. Yoga teachers, Yogishree Praveena and Smt. Bharati Sreenivasulu along with students of class IX, demonstrated various asanas.

The need for practising yoga in our daily life was stressed upon to set a foundation for a better future. Smt. Radha Murthy, Principal, along with the students and teachers participated in the event. The Principal thanked the yoga gurus for their valuable presence and guidance on this occasion.

## Orientation on Speech & Hearing Disabilities

A lecture was organized by JSS School of Nursing, Mysuru on 10.7.2018 regarding speech, language and hearing disorders and professional voice-user, at Dr. Rajendra Bhavan.

The topic was presented by Sri H.S. Harshan Kumar, lecturer, Institute of JSS Speech and Hearing who briefly explained the common speech and hearing disabilities, importance of screening, diagnosing and prompt treatment which can help in reducing the percentage of disability. He said that nurses will have close contact with the patients at the clinical and community setup and play a vital role in screening and referring such patients to the Speech & Hearing Department. He gave tips to the teaching faculty to reduce the stress on vocal cords and the importance of voice rest.

The session was very lively, effective and all the students got benefitted. Sri S.G. Shashidharakumar, Principal, Smt. D.N. Renukadevi, Vice-Principal, the teaching faculty and students of the school were present at the session.

ಜೋಳವಾಳಿಯಾನಲ್ಲ, ವೇಳೆವಾಳಿಯವ ನಾನಯ್ಯಾ
ಹಾಳುಗೆಟ್ಟೋಡುವ ಆಳು ನಾನಲ್ಲಯ್ಯಾ
ಕೇಳು, ಕೂಡಲಸಂಗಮದೇವಾ
ಮರಣವೆ ಮಹಾನವಮಿ !

- ಬಸವಣ್ಣ



ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿ ಗಳಿಸಿದ ಸುತ್ತೂರಿನ ಜೆಎಸ್‌ಎಸ್ ಹಿರಿಯ ಪ್ರಾಥಮಿಕ ಶಾಲೆಯ ಕ್ರೀಡಾಪಟುಗಳೊಂದಿಗೆ ಜೆಎಸ್‌ಎಸ್ ಸಂಸ್ಥೆಗಳ ಹೆಚ್ಚುವರಿ ಸಂಯೋಜನಾಧಿಕಾರಿಗಳಾದ ಶ್ರೀ ಸಂಪತ್ತು, ಸಹಾಯಕ ಸಂಯೋಜನಾಧಿಕಾರಿಗಳಾದ ಶ್ರೀ ವೀರಭದ್ರಯ್ಯ, ಮುಖ್ಯೋಪಾಧ್ಯಾಯರಾದ ಶ್ರೀ ಬಿ.ಎಂ. ಸಿದ್ದಪ್ಪ, ಶ್ರೀ ಜಿ.ಎಂ. ಷಡಕ್ಷರಿ ಹಾಗೂ ತರಬೇತಿ ನೀಡಿದ ದೈಹಿಕ ಶಿಕ್ಷಕರುಗಳಿದ್ದಾರೆ



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನಲ್ಲಿ ಆಯೋಜಿಸಿದ್ದ ಸಾಹಿತ್ಯಕ, ಸಾಂಸ್ಕೃತಿಕ ಮತ್ತು ಕ್ರೀಡಾವೇದಿಕೆಯನ್ನು ಡಿಡಿಪಿಯು ಡಾ. ದಯಾನಂದರವರು ಉದ್ಘಾಟಿಸಿದರು. ಚಿತ್ರದಲ್ಲಿ ಶ್ರೀಮತಿ ಎಂ.ಪಿ. ರಾಜೇಶ್ವರಿ, ಡಾ. ಜ್ಯೋತಿ ಶಂಕರ್, ಡಾ. ಕೆ.ವಿ. ಸುರೇಶ್, ಕುಸ್ತಿಪಟು ಕು. ರೀಟಾ ಪ್ರಿಯಾಂಕ ಮತ್ತಿತರರಿದ್ದಾರೆ




ಸರಸ್ವತಿಪುರಂನ ಜೆಎಸ್‌ಎಸ್ ಮಹಿಳಾ ಕಾಲೇಜಿನ ಕನ್ನಡ ವಿಭಾಗದವರು ಆಯೋಜಿಸಿದ್ದ 'ಭಾವಧಾರೆ' ಕಾರ್ಯಕ್ರಮದಲ್ಲಿ ಡಾ. ಎಸ್.ಪಿ. ಉಮಾದೇವಿ, ಪ್ರೊ. ಎಂ. ಕೃಷ್ಣೇಗೌಡ, ಪ್ರೊ. ಮೊರಬದ ಮಲ್ಲಿಕಾರ್ಜುನ, ಡಾ. ಕೆ.ವಿ. ಸುರೇಶ್ ಮತ್ತು ಡಾ. ಎಚ್.ಬಿ. ಸುರೇಶ್ ಇದ್ದಾರೆ



ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ಗುರುಪೂರ್ಣಿಮಾ ಹಾಗೂ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ಪ್ರೊ. ಕೆ.ಬಿ. ಪ್ರಭುಪ್ರಸಾದ್‌ರವರ ಉಪನ್ಯಾಸ ಹಾಗೂ ವಿದ್ವಾನ್ ಮಹಾರಾಜಪುರಂ ರಾಮಚಂದ್ರನ್ ಸಂಗೀತ ಕಾರ್ಯಕ್ರಮ ನಡೆಯಿತು. ವಿದ್ವಾನ್ ಸಿ.ಎನ್. ತ್ಯಾಗರಾಜನ್ (ವಯೊಲಿನ್) ವಿದ್ವಾನ್ ಎಚ್.ಎಲ್. ಶಿವಶಂಕರಸ್ವಾಮಿ (ಮೃದಂಗ) ಪಕ್ಕವಾದ್ಯ ಸಹಕಾರ ನೀಡಿದರು



ಕೋಲಾರ ಜಿಲ್ಲೆ ಮಾಲೂರಿನ ಜೆಎಸ್‌ಎಸ್ ಗಾಯತ್ರಿ ಪ್ರೌಢಶಾಲೆಯಲ್ಲಿ ರಾಜೇಂದ್ರ ಶ್ರೀಗಳವರ ಜಯಂತಿ ಮಹೋತ್ಸವದ ಅಂಗವಾಗಿ ಏರ್ಪಡಿಸಿದ್ದ ವಚನ ಗಾಯನ ಸ್ಪರ್ಧೆಯಲ್ಲಿ ಶ್ರೀ ಬಾಣೂರು ಚೆನ್ನಪ್ಪ, ಶ್ರೀ ಷಣ್ಮುಖಯ್ಯ, ಶ್ರೀ ಟಿ.ಸಿ. ನಾಗರಾಜು, ಶ್ರೀ ಎಚ್.ವಿ. ಲಿಂಗೇಶ್ವರಯ್ಯ, ಶ್ರೀ ಮಲ್ಲಿಕಾರ್ಜುನಪ್ಪ, ಶ್ರೀ ಬಸವಯ್ಯ, ಶ್ರೀ ಎಚ್.ಎಸ್. ಮಹೇಶ್ವರಪ್ಪ ಮೊದಲಾದವರು

Registered with the Registrar of News Papers for India No. KARBIL/2014/66470
'JSS Varthapathra' Monthly Vol. 3, Issue No. 8; August 2018




ಶ್ರೀ ಚನ್ನವೀರ ದೇಶಿಕೇಂದ್ರ ಗುರುಕುಲದ ನೂತನ ಕಟ್ಟಡ
ಸುತ್ತೂರು ಶ್ರೀಕ್ಷೇತ್ರ

ಸಂಪಾದಕ: ಡಾ. ಬಿ. ಪ್ರಭುಸ್ವಾಮಿ ಕಟ್ನವಾಡಿ ಸಹ ಸಂಪಾದಕ: ಮ.ಗು. ಬಸವಣ್ಣ
ನೆರವು: ಆರ್.ಎಸ್. ಪೂರ್ಣಾನಂದ
ಪ್ರಕಾಶಕರು : ಜೆಎಸ್‌ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
ದೂರವಾಣಿ: 2548211, 2548212 * ಫ್ಯಾಕ್ಸ್: 2548218 * e-mail: jssmasapatrike@gmail.com
ಮುದ್ರಣ: ಜೆಎಸ್‌ಎಸ್ ಪ್ರಿಂಟಿಂಗ್ ಪ್ರೆಸ್, ಮೈಸೂರು